# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಸುದರ್ಶನ ವಿಜಯ

ಕವಿ

## ಮಧುಕುಮಾರ್ ಬೋಳೂರು

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಗೊತ್ತಿಲ್ಲ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಗೊತ್ತಿಲ್ಲ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೨೦೬

**ಪಾತ್ರಗಳು:**

ದೇವೇಂದ್ರ, ಅಗ್ನಿ, ವಾಯು, ವರುಣ, ಶತ್ರುಪ್ರಸೂಧನ, ಮಂತ್ರಿ-ಗುರ್ಜರಾಸುರ, ಈಶ್ವರ, ಮೂಕಾಸುರ, ಕಾಲಾಸುರ, ದ್ವಾರಪಾಲಕ, ಬ್ರಹ್ಮ, ವಿಷ್ಣು, ಲಕ್ಷ್ಮೀದೇವಿ, ಸುದರ್ಶನ

**ಕಥಾ ಸಾರಾಂಶ:**

ಲೋಹವತೀ ನಗರದ ಶತ್ರುಪ್ರಸೂಧನ ಸ್ವರ್ಗವನ್ನು ವಶಪಡಿಸುವ ಸಲುವಾಗಿ ಶಿವನ ಕುರಿತಾಗಿ ತಪಸ್ಸನ್ನಾಚರಿಸುತ್ತಾನೆ. ಶಿವನು ಆಯುಧವನ್ನು ಕೊಟ್ಟು ಇದನ್ನು ಸೀಳಿದವನಿಂದ ನಿನಗೆ ಮರಣ ಎಂಬ ವರವನ್ನು ಕೊಡುತ್ತಾನೆ. ನಂತರ ಶತ್ರುಪ್ರಸೂಧನನು ಸ್ವರ್ಗಕ್ಕೆ ಧಾಳಿ ಮಾಡುತ್ತಾನೆ. ದೇವತೆಗಳು ಸ್ವರ್ಗಕ್ಕೆ ತೆರಳುತ್ತಾರೆ.

ವೈಕುಂಠದಲ್ಲಿ ಹರಿ ಮತ್ತು ಲಕ್ಷ್ಮಿಯು ಸಂಭಾಷಣೆಯಲ್ಲಿರುತ್ತಾರೆ. ತನ್ನ ಪತಿಯ ಸಾಧನೆಯನ್ನು ಅವಳು ಕೊಂಡಾಡುತ್ತಾಳೆ. ಹೀಗಿರುವಾಗ ಹರಿಯ ಕರದಿಂದ ಇಳಿದ ಸುದರ್ಶನ ಲಕ್ಷ್ಮಿಯನ್ನು ಆಕ್ಷೇಪಿಸುತ್ತಾನೆ. ತನ್ನ ಸಹಾಯದಿಂದ ದಾನವರನ್ನು ಶ್ರೀಹರಿಯು ಕೊಲ್ಲಲು ಕಾರಣವಾಯಿತು ಎನ್ನುತ್ತಾನೆ. ಶ್ರೀಹರಿಯು ಸುದರ್ಶನನ ಮಾತನ್ನು ಒಪ್ಪುತ್ತಾನೆ. ಈಗ ದೇವತೆಗಳಿಗೆ ಬಂದ ಕಷ್ಟವನ್ನು ನಿವಾರಿಸುವುದಕ್ಕೆ ಹರಿಯು ಶತ್ರುಪ್ರಸೂಧನನ ಸಂಹಾರಕ್ಕೆ ಮೊದಲಾದಾಗ ಅಲ್ಲಿ ವಿಷ್ಣುವಿಗೆ ಸೋಲಾಗುತ್ತದೆ. ಸುದರ್ಶನನು ಹರಿಗೆ ಧೈರ್ಯವನ್ನು ಹೇಳಿ ತಾನು ಯುದ್ಧಕ್ಕೆ ಹೋಗಿ ಶತ್ರುಪ್ರಸೂಧನನನ್ನು ಕೊಲ್ಲುತ್ತಾನೆ. ದೂರದಲ್ಲಿ ನಿಂತಿದ್ದ ಸುದರ್ಶನನನ್ನು ಹರಿಯು ತನ್ನ ಕರವನ್ನ ಮತ್ತೆ ಏರುವಂತೆ ಕೇಳಿದಾಗ, ಸುದರ್ಶನ ಅಹಂಕಾರವನ್ನು ವ್ಯಕ್ತಪಡಿಸುತ್ತಾನೆ. ತನ್ನ ಕಾರಣದಿಂದ ಎಲ್ಲವೂ ಎಂದು ಗರ್ವಪಡುತ್ತಾನೆ. ಇದಕ್ಕೆ ಹರಿಯು ಕೋಪದಿಂದ ಭೂಮಿಯಲ್ಲಿ ನರನಾಗಿ ಹುಟ್ಟು ಎಂದು ಶಪಿಸುತ್ತಾನೆ. ಸುದರ್ಶನನಿಗೆ ತನ್ನ ತಪ್ಪಿನ ಅರಿವು ಉಂಟಾಗುತ್ತದೆ. ಮುಂದೆ ಸುದರ್ಶನ ಮಾಹಿಷ್ಮತಿಯ ದೊರೆ ಕೃತವೀರ್ಯನ ಮಗ ಕಾರ್ತವೀರ್ಯನಾಗಿ ಜನ್ಮ ತಾಳುಯುತ್ತಾನೆ.

**ಕವಿ ಪರಿಚಯ:**

ಮಧುಕುಮಾರ್ ನಿಸರ್ಗ ಇವರು ಮಂಗಳೂರಿನ ಬೋಳೂರಿನವರು. ತಂದೆ ದೋಗ್ರಪುಜಾರಿ ಮತ್ತು ತಾಯಿ ಚಂದ್ರಾವತಿ. ಹಲವಾರು ಮೇಳಗಳಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಕಾಲ ೧೯೩೦. ಕಲಾರಂಗ ಉಡುಪಿಯ ಐರೋಡಿ ರಾಮ ಗಾಣಿಗ ಪ್ರಶಸ್ತಿಗೆ ಭಾಜನಾಗಿದ್ದಾರೆ.

ಇವರು ಬರೆದ ಪ್ರಸಂಗಗಳು: ಸುದರ್ಶನ ವಿಜಯ, ಏಕಾದಶೀ ದೇವೀಮಹಾತ್ಮೆ, ಬರ್ಬರೀಕ ಪ್ರತಾಪ, ಕಡುಗಲಿ ಕುಮಾರರಾಮ, ಹಯಗ್ರೀವಾಸುರ ವಧೆ, ಬಾಲೆ ನಾಗಮ್ಮ, ವಜ್ರಂದ ಕುಮಾರೆ, ಮದನಮೋಹಿನಿ ಕಲ್ಯಾಣ, ವೈದ್ಯನಾಥ ಮಹಾತ್ಮೆ, ಶ್ರೀ ಶಾಕಂಬರೀ ಮಹಾತ್ಮೆ, ಕೇತಕೀಶಾಪ – ಕಲಿ ಪ್ರಭಾವ, ಮುರಾಸುರ ವಧೆ, ಗುಪ್ತಕ್ಷೇತ್ರಮಾಹಾತ್ಮ್ಯಂ, ಸಿರಿಸೀಮೆದ ಕರಿಬಂಟೆ, ಬ್ರಹ್ಮಶ್ರೀ ನಾರಾಯಣಗುರು ಮಹಾತ್ಮೆ, ಗುಣಸುಂದರಿ ಪಾಪಣ್ಣ ವಿಜಯ, ಸತ್ಯನಾರಾಯಣ ವ್ರತಮಹಾತ್ಮೆ, ಶ್ರೀ ಮಂತ್ರಾಲಯ ಮಹಾತ್ಮೆ, ಕದನಕಲಿ ಕರಿಬಂಟ, ಕರ್ಣಾರ್ಜುನ, ಕೋಟಿ ಚೆನ್ನಯ, ಕುದ್ರೋಳಿ ಕ್ಷೇತ್ರಮಹಾತ್ಮೆ, ಸ್ವಾಮಿಭಕ್ತೆ ತಿಮ್ಮಬೈದ್ಯ

**ಟಿಪ್ಪಣಿ:**

ತಾಳಮದ್ದಲೆ ಮತ್ತು ಆಟ ಎರಡರಲ್ಲೂ ಕೂಡ ಈ ಪ್ರಸಂಗ ಹೆಚ್ಚು ಬಳಕೆಯಲ್ಲಿದೆ.

# ಪ್ರಸಂಗ ಸಾಹಿತ್ಯ

**ನಾಟಿ - ಝಂಪೆ**
ವಂದಿಸುವೆ ಗಣನಾಥ | ನಂದಿವಾಹನಜಾತ |
ಇಂದ್ರಾದಿ ಸುರಪ್ರೀತ | ಸಿಂಧುಗುಣಭರಿತ ||
ಜಯ ಜಯತು ಜಯತು ||1||

ನಂಬಿದೆನು ನಾನಿನ್ನ | ಬೆಂಬಿಡದೆ ಸಲಹೆನ್ನ |
ಅಂಬಿಕಾತನಯ ಹೇ | ರಂಬ ಶುಭವೀಯೊ ||
ಜಯ ಜಯತು ಜಯತು ||2||

ಸುರಿಸೆನಗೆ ವಿದ್ಯೆಗಳ | ಕರುಣಿಸೋ ಬುದ್ಧಿಗಳ |
ಬರೆವ ಕೃತಿಗಳ ಮೆರೆಸು | ದುರುಳರ ವಿನಾಶ ||
ಜಯ ಜಯತು ಜಯತು ||3|| 3 ||

**ಸೌರಾಷ್ಟ್ರ - ಅಷ್ಟ**
ಶುಂಭಾಂತಕಿ ಗೌರಿ ಶಂಭುಮನೋಹರಿ || ಮೂಕಾಂಬಾ || ದೇವಿ |
ಕಂಬುಕಂಠಿನಿ ಮಹಿಷಾಸುರಮರ್ದಿನಿ || ಮೂಕಾಂಬಾ ||1||

ಶಂಕರಿ ಶುಭಕರಿ ಶಂಖಚಕ್ರಧರಿ || ಮೂಕಾಂಬಾ || ತಾಯೆ |
ಪಂಕಜಮುಖಿ ಪದಪಂಕಜಕೊಂದಿಪೆ || ಮೂಕಾಂಬಾ ||2|| 5 ||

**ಕಂದ**
ಹರಿ ಕುಜ ಬುಧ ರಾಹು ಕೇತು |
ಹರಿ ಶನಿ ಸುರೇಶ ಹರಿ ಶುಕ್ರ ಹರಜ ಶರಜನ ||
ಗುರು ಬೃಹಸ್ಪತಿ ನಿಋತಿ |
ವರುಣ ಕುಬೇರ ಹರಿ ವಾಯುಗಳೆಲ್ಲರ ನುತಿಪೆ ||1|| 6 ||

**ವಾರ್ಧಕ**
ಹರಿಯ ಹರಿಯನು ನಿರುತ ಹರಿಸುವನ ಪೆತ್ತವನ |
ತರಳನನು ತರಿದವನ ತರಳನನು ತರಿದವನ |
ತರಳನನು ತಂದವನ ತರಳನಿಗೆ ತರಳೆಯನು ಕರವೆತ್ತಿ ಇತ್ತ ತಪನ ||
ಹರಿಯ ತಾತನ ಸುತೆಯ ವರನ ತರಳನ ಮಗನ |
ತರಳನ ತಳೋದರಿಯ ತರಳನನು ತರಿದವನ |
ತರಳನನು ಪಡೆದವನ ಚರಣಡಿಂಗರಿಗನಂ ಕರಮುಗಿದು ನೆನೆವೆ ಸತತ ||1|| 7 ||

**ಭಾಮಿನಿ**
ಪರಶುಧರಗೊಂದಿಸುತ ಗೌರೀ |
ವರನ ಧ್ಯಾನಿಸಿ ನರಹರಿಯ ಪದ |
ಕೆರಗಿ ಬ್ರಹ್ಮನ ಪ್ರಾರ್ಥಿಸುತ ಶಾರದೆಯ ಪೂಜಿಸುತ ||
ಕರವ ಜೋಡಿಸಿ ತಂದೆ ತಾಯ್ಗಳ |
ಚರಣಕೆರಗುತ ನಂದಳಿಕೆ ಕವಿ |
ವರ ಮುದ್ದಣನ ಮನದಿ ಸ್ಮರಿಸುತ ಬರೆವೆನೀ ಕೃತಿಯ ||1||

ಕರಿಪುರಾಧಿಪ ಧರ್ಮರಾಯಗೆ |
ಪರಮ ಮಾರ್ಕಂಡೇಯ ಲಕ್ಷ್ಮೀ |
ವರನ ಚರಿತೆಯನರುಹುತಿರೆ ಜನಪಾಲ ಮುನಿಪದಕೆ ||
ಎರಗುತೆಂದನು ಮಾಧವನ ಕರ |
ದಿರುವ ಚಕ್ರ ಪ್ರಸೂಧನನ ಕೊಂ |
ದಿರುವ ಕಥೆಯನು ಪೇಳಬೇಕೆನಲೆಂದನಾ ಮುನಿಪ ||2|| 9 ||

**ಭೈರವಿ - ಝಂಪೆ**
ಚಿತ್ರವಿಸು ಧಾತ್ರೀಶ ವೃತ್ರಾರಿ ನಾಕದಿ ಸ |
ಮಸ್ತ ಸುರ ಮೊತ್ತದಿಂದಿತ್ತನೋಲಗವ ||1||

ಭರಿತ ವೈಭವದಿ ಮೆರೆದಿರಲು ಮೇನಕೆ ರಂಭೆ |
ತರುಣಿಯರು ಹರಿತಂದು ಸರಸದಿ ಕುಣಿದರು ||2|| 11 ||

**ಸುರುಟಿ - ಏಕ**
ತರುಣಿಯರಾಡಿದರೂ | ನಾಟ್ಯವ |
ಹರುಷದೊಳಾಡಿದರೂ ||
ಕಿರುನಗೆ ಬೀರುತ | ತಿರುಗುತ ಭರದಿಂ |
ಬೆರಳಲಿ ತೋರ್ದರು | ಥರಥರ ಮುದ್ರೆಯ ||1||

ತಕ್ಕಿಟ ತಕಝುಣುತ | ಬಾಯೊಳು |
ದಿಕ್ಕಿಟತಕ ಎನುತ ||
ಅಕ್ಕರೆಯಲಿ ಪದು | ಮಾಕ್ಷಿಯರು ತಮ |
ಗಿಕ್ಕುವ ಸುರಪನ | ಪಕ್ಕದಿ ಸರಿಯುತ ||2|| 13 ||

**ಕುಸುಮ ಷಟ್ಪದಿ**
ತರುಣಿ ಮೇನಕೆ ರಂಭೆ | ತುಂಬುಜವ್ವನೆಯರನು |
ಸುರರೊಡೆಯ ಹರುಷದಿಂ ಕಳುಹುತ್ತಲಿ ||
ವರುಣ ವಾಯು ಕುಬೇರ | ಮೊದಲಾದ ಸುಮನಸರ |
ನೆರಹಿಸುತ ಮನದಿರವ ನುಡಿದನಾಗ ||1|| 14 ||

**ಕಾಪಿ - ಅಷ್ಟ**
ಸುರರೆಲ್ಲ ಕೇಳಿರಿ ಮಾತ | ನಮ್ಮ |
ಪುರದ ವೈಭವ ಮೂರು ಜಗದಿ ವಿಖ್ಯಾತ ||
ಸುರೆ ಸಿರಿ ಸುರಧೇನುವಿಹುದು | ಇಂಥ |
ಪರಮ ಸೌಭಾಗ್ಯಗಳಿನ್ಯಾರಿಗಿಹುದು||1||

ಮಂದರಧರ ಇಂದಿರೇಶ | ಹಂದೆ |
ಮಂದೆಯ ಆಗಾಗ ಕೊಂದು ಸಂತೋಷ ||
ಚಂದದಿ ಕರುಣಿಪ ನಮಗೆ | ಅದ |
ರಿಂದೊಂದು ಯೋಚನೆ ಬಂದುದು ತಲೆಗೆ ||2|| 16 ||

**ಸೌರಾಷ್ಟ್ರ - ತ್ರಿವುಡೆ**
ಹಂದೆಗಳು ದಾಯಾದ್ಯ ಮತ್ಸರ |
ದಿಂದ ಪದೆ ಪದೆ ಕೊಡುವರುಪಟಳ |
ವಿಂದು ನಿಮ್ಮಭಿಮತವ ಪೇಳಿನ | ಲೆಂದರೆಲ್ಲ ||1|| 17 ||

**ಭೈರವಿ - ಅಷ್ಟ**
ಅನುಮಾನವೇಕೆ ಜೀಯ | ನಿನ್ನಯ ಬಳಿ |
ಅನಲ ನಾನಿರಲು ಭಯ ||
ಮನದೊಳೆಣಿಸದಿರು | ದನುಜರು ಬಂದರೆ |
ಹನನ ಗೈಯುವೆ ನಿಶ್ಚಯ ||1||

ಸಿರಿಯಾಸೆಯಲಿ ಖೂಳರು | ನಾಕಕೆ ಬಂದು |
ಹರಣ ನೀಗುತಲಿಹರು ||
ಸಿರಿವರ ನಿರತ ನ | ಮ್ಮೆಡೆಯೊಳಗಿರುವಾಗ |
ದುರುಳರ ಭೀತಿ ಬೇಡ ||2|| 19 ||

**ಮಾರವಿ - ಏಕ**
ಘುಡು ಘುಡಿಸುತ ಜಡ | ನುಡಿದ ಸುರರು ಎಡೆ |
ಗೆಡೆಗಡಿಯಿಡೆ ಪುರಕೆ ||
ತಡೆದೆಡಮುಡಿ ಬಿಗಿ | ದಡಿ ಜಡದಿಡುವೆನು |
ಬಿಡಿಬಿಡಿ ಗಡಿಬಿಡಿಯ ||1||

ಬೊಮ್ಮನ ಮೆಚ್ಚಿಸು | ತೊಮ್ಮನದಿಂ ವರ |
ಘಮ್ಮನೆ ಪಡೆದು ಖಳ ||
ರೆಮ್ಮಯ ಪೊಳಲೆಡೆ | ಜೊಮ್ಮನೆ ಬಂದರೆ |
ದಮ್ಮವು ಬಿಡದೆಮ್ಮ ||2|| 21 ||

**ಬಿಲಹರಿ – ಅಷ್ಟ (ಮಧುಮಾಧವಿ – ಏಕ)**
ಧಿರುರೆ ಮೆಚ್ಚಿದೆ ಸರ್ವರರುಹಿದ ನುಡಿಗೆ |
ಧುರದೊಳಗಿದಿರಿಲ್ಲ ಧರೆಯೊಳು ನಿಮಗೆ ||
ದುರುಳರಂಜಿಕೆ ನಮಗಿರದಿನ್ನು ಮುಂದೆ |
ಸರಸಿಜಾಕ್ಷನ ಕೃಪೆ ಇರಲೆಮಗೊಂದೆ ||1|| 22 ||

**ಭಾಮಿನಿ**
ಧರಣಿಪತಿ ಕೇಳಿತ್ತ ಸುರಪತಿ |
ಸುರರ ಪರಿಪರಿಯಿಂದ ಪೊಗಳುತ |
ಲಿರುತಿರಲು ಮುನ್ನೊರೆವೆ ಲಾಲಿಸು ಕರ್ಬುರಾನ್ವಯದಿ ||
ದುರುಳ ಶತ್ರುಪ್ರಸೂಧನನು ಜನಿ |
ಸಿರಲು ಮಹಲೋಹವತಿ ಪುರದೊಳು |
ಹರುಷದಿಂದೋಲಗವನೀಯುತ ಮಂತ್ರಿಯೊಡನೆಂದ ||1|| 23 ||

**ಕಾಂಭೋದಿ - ಝಂಪೆ**
ಕೇಳಯ್ಯ ಮಂತ್ರೀಶ | ಭೂಲೋಕದೆನಗಿಂತ |
ಮೇಲೆನಿಪ ವೀರರಾರಿಹರು ||
ಭಾಳನೇತ್ರನ ಕೃಪೆಯು | ಸತತವೆಮಗಿಹುದು ಖಳ |
ಜಾಲವೇ ಶ್ರೇಷ್ಠ ಜಗದೊಳಗೆ ||1|| 24 ||

**ಸೌರಾಷ್ಟ್ರ - ತ್ರಿವುಡೆ**
ಹಿರಿಯವರು ನಾವ್ ನಮ್ಮ ಹಕ್ಕಿನ |
ಪುರದಿ ವೈಮಾನಿಕರು ವಿಭವದೊ |
ಳಿರುವರೈ ಅವರೊಶದಿ ಬಿಡುವುದು | ಸರಿಯೆ ಪೇಳು ||1||

ಸಿದ್ಧಗೊಳಿಸೈ ಸುಭಟಶ್ರೇಣಿಯ |
ಅದ್ರಿಹರ ಶಕ್ರನನು ಗುದ್ದುತ |
ಮೆದ್ದ ಸುಖ ಕಾರಿಸುತ ಬರುವೆನು | ಯುದ್ಧದಲ್ಲಿ ||2|| 26 ||

**ಭೈರವಿ - ಏಕ**
ಆದರೆ ಸಂಶಯವೊಂದು | ಮಧು |
ಸೂದನನಾಗಲೆ ಬಂದು ||
ಕಾದಿರ್ಪನು ಎಂದೆಂದು | ನೀ |
ಪೋದರೆ ಬಂದಿತು ಕುಂದು ||1|| 27 ||

**ಸೌರಾಷ್ಟ್ರ - ತ್ರಿವುಡೆ**
ಜನರಹಿತ ವನವನು ಪ್ರವೇಶಿಸಿ |
ಮನುಮಥಾರಿಯ ತಪದಿ ಮೆಚ್ಚಿಸಿ |
ಹನನವಾಗದ ವರವ ಪಡೆಯುತ | ಕ್ಷಣದಿ ಬಂದು ||1||

ಮತ್ತೆ ಸ್ವರ್ಗವ ಮುತ್ತಿ ತ್ರಿದಶರ |
ಉತ್ಕರವ ಬಡಿದಟ್ಟಲವರನು |
ನಿತ್ಯ ಸಲಹುವ ಅಚ್ಯುತನು ಬರೆ | ಚ್ಯುತಿಯು ಬರದು ||2||

ಸಹಜವಿದು ನೀ ನುಡಿದ ನುಡಿ ನಾ |
ಬಹತನಕ ಅರಮನೆಯ ಕಾಯುತ |
ಇಹುದು ಜಾಗ್ರತೆಯಲ್ಲಿ ಪ್ರಜೆಗಳ | ಸಹಿತ ಸುಖದಿ ||3||

ದಿಟ್ಟ ಮಂತ್ರಿಯೊಳಿತ್ತು ರಾಜ್ಯವ |
ಜಟ್ಟಿ ಚಲ್ಲಣ ತೊಟ್ಟು ದಾನವ |
ದಟ್ಟವನದೆಡೆ ಪೊರಟ ರಥವನು |ಥಟ್ಟನಡರಿ ||4|| 31 ||

**ಭಾಮಿನಿ**
ಬರಬರುತ ರಥದಿಂದಿಳಿದು ಸುಂ |
ದರ ಸ್ಥಳವನಾರಿಸುತ ರಾಕ್ಷಸ |
ಹರಿವ ಹರಿಯೊಳು ಮಿಂದು ಶುಚಿಯಾಗುತ್ತ ಹೃದಯದಲಿ ||
ಸೆರೆಹಿಡಿದು ಹರಿಧರನ ಭಜಿಸಿದ |
ದುರಿತಹರ ಕೋಕಾರಿಕಂಕಣ |
ಗಿರಿಜೆವರ ನಿತ್ಯಾನಿರಂಜನ ಹರಸೊ ಮೈದೋರಿ ||1 || 32 ||

**ಮಾರವಿ - ಏಕ**
ಮೃಡನನು ಕಾಣದೆ ದಡಿಗನು ಕೋಪದಿ |
ಒಡಲನು ಪಂಚಾಗ್ನಿ ||
ನಡುವಿನೊಳಿಡಿಸುತ ತೊಡಗಿದ ತಪವನು |
ಬಿಡೆನೀ ಹಟವೆಂದು ||1||33 ||

**ಭಾಮಿನಿ**
ಇಳೆಯಧಿಪ ಕೇಳಿಂತು ಖೂಳನ |
ಛಲದ ತಪದುರಿಯಿಂದ ಲೋಕವು |
ತಳಮಳಿಸಿತುತ್ಪಾತವಾದುದು ದೇವಪುರದಲ್ಲಿ ||
ತಿಳಿದು ಶಂಕರನಿವನ ಭಕ್ತಿಗೆ |
ತಲೆಯ ತೂಗುತ ವೃಷಭವೇರುತ |
ಗಳಗಳನೆ ಬಂದಸುರನಿಗೆ ಮೈದೋರುತಿಂತೆಂದ ||1|| 34 ||

**ಸುರುಟಿ - ಏಕ**
ಮೆಚ್ಚಿದೆನೆಲೆ ಖಳನೆ | ಈ ತಪ |
ದಿಚ್ಛೆಯನುಸಿರೊಡನೆ ||
ಬೆಚ್ಚದೆ ನೀ ಮನ | ಬಿಚ್ಚುತ ಕೇಳ್ ನಿ |
ನ್ನಿಚ್ಛೆಯನೀಯುವೆ | ಅಚ್ಚಳಿಯಂದದಿ ||1||

ಬಿಡುಬಿಡು ಕಡುತಪವ | ನಾನಿದೊ |
ಕೊಡುವೆನು ಬಲುವರವ ||
ನುಡಿಯುತ ಜಡಧರ | ದಡಿಗನ ಶಿರದೆಡ |
ತಡವರಿಸಿದನೊಡ | ಬಡಿಸುತ ಅಡಿಯನ ||2|| 36 ||

**ಬೇಗಡೆ - ಏಕ**
ಹರನೊರೆದ ಮೃದು ನುಡಿಯ ಖಳ ಕೇಳ್ದು | ಶಿರ ನೆಗಹುತಲಿ ಕಣ್ |
ತೆರೆದು ನೋಡುತ ಹರುಷವನು ತಾಳ್ದು ||
ಕರಮುಗಿದು ಪದಕೆರಗಿ ಅರುಹಿದ |
ಭರದಿ ಅಮರತ್ವವನು ಕರುಣಿಸಿ |
ಹರಸೊ ಗಿರಿಜಾವರನೆ ಶಶಿಧರ |
ನಿರತ ಭಜಕರ ಪೊರೆವ ಶಂಕರ ||1|| 37 ||

**ಸಾಂಗತ್ಯ - ರೂಪಕ**
ಅಮರತ್ವವೀವಧಿಕಾರವು ಎನಗಿಲ್ಲ |
ಸಮವಲ್ಲ ನೀ ಯಾಚಿಸುವುದು ||
ಅಮರತ್ವವಲ್ಲದೆ ಬೇರೆ ವರವ ಕೇಳು |
ಮಮತೆಯೊಳೀವೆ ನಿಶ್ಚಯವು ||1|| 38 ||

**ಕೇದಾರಗೌಳ - ಝಂಪೆ**
ಒರೆದ ಕ್ಷಣ ಖಳ ಕೇಳ್ದನು | ಅರಿಗಳನು |
ತರಿವ ಶಕ್ತ್ಯಾಯುಧವನು ||
ಧುರದಿ ಸಾವಡಸದೆನಗೆ | ಹರಿ ಬ್ರಹ್ಮ |
ಗಿರಿಜೆಪತಿ ನಿಮ್ಮೊಳೆನಗೆ ||1||

ಯೋನಿಮುಖದಿಂ ಜನಿಸಿದ | ಸುರ ಮನುಜ |
ಪ್ರಾಣಿಯಿಂ ನಾ ಸಾಯದ ||
ಮಾನವಂತನೆ ವರವನು | ಇತ್ತೆನಗೆ |
ಸಾನುರಾಗದಿ ಕಳುಹು ನೀನು ||2|| 40 ||

**ಕೇದಾರಗೌಳ - ಅಷ್ಟ**
ಹೇಳಿದಂತಾಗಲೆಂದಾಯುಧವನು ಕೊಟ್ಟು |
ಕಾಳಗದಲಿ ಇದನು ||
ಸೀಳುಗೈದವನಿಂದ ಕಾಲ ಬರುವದೆಂದು |
ಫಾಲಲೋಚನ ಪೋದನು ||1|| 41 ||

**ಮಾರವಿ - ಏಕ**
ಧರಣಿಪ ಕೇಳ್ ಹರ ಪೊರಡಲು ಕರ್ಬುರ |
ಧರಿಸುತ ಆಯುಧವ ||
ಭರದಿಂ ಪುರವನು ಸೇರುತಲರುಹಿದ |
ಹರುಷದಿ ಮಂತ್ರಿಯೊಳು ||1|| 42 ||

**ಸೌರಾಷ್ಟ್ರ - ತ್ರಿವುಡೆ**
ಹಿಡಿದ ಕಾರ್ಯವ ಬಿಡದೆ ಸಾಧಿಸಿ |
ಪಡೆದೆ ವರವನು ನೆರಹು ಸೇನೆಯ ||
ಒಡನೆ ನಾಕಕೆ ಪೋಗಿ ಗೆಲ್ಲುವ | ಕಡವಳರನು ||1|| 43 ||

**ಭೈರವಿ - ಅಷ್ಟ**
ಒಡೆಯನಾಜ್ಞೆಯ ಕೇಳುತ | ಸೈನ್ಯವ ಸಿದ್ಧ |
ಪಡಿಸಿ ಪೋಗುವ ಎಂದಾತ ||
ಒಡನೆ ಶಸ್ತ್ರವ ಧರಿಸುತ | ರಥವನೇರಿ |
ನಡೆದರು ಧುರಕೆನ್ನುತ ||1|| 44 ||

**ಸೌರಾಷ್ಟ್ರ - ತ್ರಿವುಡೆ**
ಬರ ಬರುತ ನಾಕವನು ಮುತ್ತುತ |
ಚರರ ಬಡಿದೋಡಿಸಲು ಓಡುತ ||
ಅರುಹಿದರು ಪುರುಹೂತಗೆರಗುತ | ದುರಿತವನ್ನು ||1|| 45 ||

**ಮುಖಾರಿ - ಏಕ**
ಕೇಳು ಕೇಳಯ್ಯ ಪುರುಹೂತ | ನಾವೆಂಬ ಮಾತ |
ಪೇಳ್ವುದೇನಾದ ಅನಾಹುತ ||
ಖೂಳರು ಸೇನಾ | ಜಾಲದೊಳೈದುತ |
ಕಾಳಗಕೆನುತಲಿ | ಬೇಲಿಯ ಬಲಿದರು ||1||

ಅರಸ ಪ್ರಸೂಧನನೆಂಬವ | ಮತ್ತೊರ್ವನವನ |
ದುರುಳ ಅಮಾತ್ಯನು ಗರ್ಜಿಸುವ ||
ದ್ವಾರದಿ ತಡೆಯಲು | ಬಾರಿಸಿ ಬೆನ್ನಿಗೆ |
ಭೇರಿಯಗೈದರು | ದೊರೆಯೆ ದನುಜರು ||2|| 47 ||

**ಮಾರವಿ - ಏಕ**
ಚರರರುಹಿದ ನುಡಿ ಸುರಪತಿ ಕೇಳುತ |
ಕೆರಳುತ ಸುಮನಸರ ||
ಕರೆಸಲು ಸರ್ವರು ಒರೆದರು ಚರಣ |
ಕ್ಕೆರಗುತ ಪೌರುಷವ ||1||

ಖ್ಯಾತಿಯೊಳೆಂದನು ಅಗ್ನಿಯು ನಾಥನೆ |
ಯಾತಕೆ ಕರೆಸಿದಿಯೊ ||
ಧೂರ್ತರ ವ್ರಾತವು ಪುರದೆಡೆ ಬಂದುದೆ |
ಭೀತಿಯ ಬಿಟ್ಟರುಹು ||2|| 49 ||

**ಸೌರಾಷ್ಟ್ರ - ತ್ರಿವುಡೆ**
ಕೇಳಿರೈ ಸುರರೆಲ್ಲ ಖೂಳರ |
ಜಾಲ ನಮ್ಮಯ ಪುರವ ಮುತ್ತಿಹು |
ದೇಳಿ ಜವದಲಿ ಕೊಲ್ಲದಿದ್ದರೆ | ಬಾಳಿ ವ್ಯರ್ಥ ||1||

ವರುಣನೆಂದನು ಹಿರಿಯರೆಂಬುವ |
ಗರುವ ತಲೆಗೇರಿರುವುದವರಿಗೆ |
ಪುರಕೆ ಪುನ ಬಂದಿರುವ ದಾನವ | ನರುಹಿ ಯಾರು ||2|| 51 ||

**ಭೈರವಿ - ಅಷ್ಟ**
ಕೆಟ್ಟ ಬೀಜವು ಸುಟ್ಟರು | ಪುಟ್ಟುವ ತೆರ |
ದುಷ್ಟರು ಪುನ ಬಂದರು ||
ಭ್ರಷ್ಟ ಪ್ರಸೂಧನ | ಕುಟ್ಟುತ ಚಾರರ |
ನಟ್ಟಿದನೆನ್ನೆಡೆಗೆ ||1|| 52 ||

**ಸೌರಾಷ್ಟ್ರ - ತ್ರಿವುಡೆ**
ಎಂದುಸುರಿ ಸೈನ್ಯವನು ನೆರಹಿಸಿ |
ಇಂದ್ರನೈರಾವತವನೇರುತ |
ಸಿಂಧು ಘೋರ್ಗರೆವಂದ ಸಮರಕೆ | ಬಂದರಾಗ ||1|| 53 ||

**ಪಂಚಾಗತಿ - ಮಟ್ಟೆ**
ಬರಬರುತ್ತ ಪುರದ ಹೊರಗೆ |
ಬರವ ಕಾಯುತಿರುವ ಖಳರ |
ತರಿಯಲೆನುತ ಶರದ ಮಳೆಯ | ಸುರರು ಸುರಿದರು ||1|| 54 ||

**ಮಾರವಿ - ಏಕ**
ಎಸೆದ ಶರದಿ ಕೆಲ ಖಳರಸು ನೀಗಲು |
ಮಸೆವುತ ದಾನವರು ||
ಹೊಸೆಮಸೆದಲಗುಗಳೆಸೆಯಲು ಸುರರಾ |
ಗೆಸೆದರು ಪ್ರತಿಕಣೆಯ||1|| 55 ||

**ಪಂಚಾಗತಿ - ಮಟ್ಟೆ**
ಏನನೆಂಬೆ ಧುರದ ಪರಿಯ |
ದನುಜರ್ ಸುರರು ಸೇರಿ ಭರದಿ |
ಕಣೆಯ ಸುರಿಸುತಿರುವ ಸಮಯ | ರಣವ ಗೈಯುತ ||
ಅನಲ ಹಲವು ಕುಮತಿಗಳನು |
ಹನನಗೈದು ಮುಂದಕೈದು |
ಕಿನಿಸಿನಿಂದ ಖಳನ ಮಂತ್ರಿಗೆಂದ ತಡೆಯುತ ||1|| 56 ||

**ಶಂಕರಾಭರಣ - ಮಟ್ಟೆ**
ಭಳಿರೆ ನಾಕವೇರಿ ನಮ್ಮ |
ಬಲದ ಮುಂದೆ ಶೌರ್ಯ ತೋರಿ ||
ಕಲಹಕೆಂದು ಬಂದ ನಿನ್ನ | ಪೇಳು ಪೆಸರನು ||1||

ಮೆರೆವ ಲೋಹವತಿಯ ಪುರದ |
ಅರಸನ ಮಂತ್ರೀಶ ನಾನು ||
ಬರಿದೆ ಬಗುಳಬೇಡ ಪೆಸರು | ಶೂರ ಗುಜ್ಜರ ||2|| 58 ||

**ಭೈರವಿ - ಮಟ್ಟೆ**
ಸರುವ ಭಕ್ಷಕ | ನೆಂದು | ಕರೆವರೆನ್ನನು ||
ಗರುವತೋರ್ದಡೀಗ ನಿನ್ನ |
ಉರವ ಸಿಗಿವೆನು ||1|| 59 ||

**ಶಂಕರಾಭರಣ - ಏಕ**
ಒದರಬೇಡವೆಲವೊ ನೀನು |
ಮದನವೈರಿ ಶಿವನ ವೀರ್ಯ ||
ರದನ ತಾಗದಂತೆ ಮೆದ್ದ |
ಅಧಮನಲ್ಲವೋ ||1||

ಹರನ ವೀರ್ಯ ತಿಂದರೇನು |
ದುರುಳ ತಾರಕಾಖ್ಯನನ್ನು ||
ತರಿಯುತೆಮ್ಮ ದುರಿತವನ್ನು |
ಹರಜ ಹರಿಸಿದ ||2|| 61 ||

**ಭೈರವಿ - ಅಷ್ಟ**
ಮಾತಾಡಿ ಫಲವೇನಿನ್ನು | ಕಾಳಗದಿ ವಿ |
ಖ್ಯಾತನಾದರೆ ಶರವನು ||
ಆತುಕೊಳ್ಳೆನುತಲಿ | ಧೂರ್ತನು ಎಸೆಯಲು |
ಜಾತವೇದನು ಓಡಿದ ||1|| 62 ||

**ಭೈರವಿ - ಏಕ**
ಪಾವಕ ಜಾರಿದ ಕಂಡು | ಹರಿ |
ಧಾವಿಸಿ ಕಣೆ ಕೈಕೊಂಡು ||
ಜೀವನ ಹೀರುವೆನೆಂದು |
ಬಲು ಠೀವಿಯೊಳರುಹಿದ ನಿಂದು ||1||

ಹಾರದಿರೆಲವೋ ಖಳನೇ | ರಣ |
ತೋರಲು ಕೊಲುವೆನು ಒಡನೆ ||
ಸಿರಿಗಳ ಆಸೆಯ ಬಿಟ್ಟು | ನೀ |
ತೆರಳೆಲೊ ಈ ಪುರ ಬಿಟ್ಟು ||2||

ವರುಣನೆ ಬಗುಳದಿರೆಲವೋ | ನಿಮ |
ಪೌರುಷ ನಾವರಿತಿಹೆವು ||
ಧುರದಲಿ ನಿಮ್ಮನು ಕೊಂದು | ಈ |
ಪುರವನು ಬಿಡೆವೆಂದೆಂದು ||3|| 65 ||

**ಶಂಕರಾಭರಣ - ಏಕ**
ಸಾಕು ನಿನ್ನ ಹೆಗ್ಗಳಿಕೆಯು |
ಯಾಕೆ ಬಗಳುತಿರುವೆ ಆ ಪಿ |
ನಾಕಿ ಬಂದು ಪೇಳೆ ನಾಕ | ಲೋಕ ಸಿಕ್ಕದು ||1|| 66 ||

**ಸೌರಾಷ್ಟ್ರ - ತ್ರಿವುಡೆ**
ಹರಿಯ ನುಡಿಯನು ಕೇಳ್ದು ದಾನವ |
ಕೆರಳಿ ವಿಶಿಖವ ಸುರಿಸಲಾಕ್ಷಣ |
ವರುಣ ತಡೆಯದೆ ಹೆದರಿ ಹರಿದನು | ಪುರಕೆ ತ್ವರದಿ ||1||

ಧುರದಿ ವೀರರು ಓಡಿಪೋದುದ |
ಪರಿಯ ಸುರಪನು ಕಂಡು ಕೋಪದಿ |
ಕರದಿ ವಜ್ರಾಯುಧವ ಧರಿಸುತ | ದುರುಳಗೆಂದ ||2|| 68 ||

**ಶಂಕರಾಭರಣ - ಮಟ್ಟೆ**
ಆರೆಲೋ ಮದಾಂಧ ನಿಲ್ಲು |
ವೀರರನ್ನು ರಣದಿ ಗೆಲುವ ||
ಶೂರತನವನೆನ್ನೊಳೀಗ |
ತೋರು ತೋರೆಲಾ ||1|| 69 ||

**ಮೆಚ್ಚುಗೌಳ - ಅಷ್ಟ**
ಭಳಿಭಳಿರೆಲೆ ಶಕ್ರನೆ | ಕೊಳು |
ಗುಳಕಾಗಿ ಬಂದೆಯ ಖ್ಯಾತನೆ ||
ಗಳಹದಿರೆನ್ನೊಳೆಂದೆನ್ನುತ | ಶರ |
ಬಳಗವ ಸುರಿಸಿದ ನಗುತ ||1|| 70 ||

**ಮಾರವಿ - ಏಕ**
ದಡಿಗನು ಬಿಟ್ಟಿಹ ಶರಗಡಣವ ಸುರ |
ರೊಡೆಯನು ತುಂಡರಿಸಿ ||
ಒಡನೆಯೆ ವಜ್ರದೊಳಿಡಲಾಕ್ಷಣ ಖಳ |
ಮಡಿದನು ಆರ್ಭಟಿಸಿ ||1||

ಮಿತ್ರನು ಸತ್ತುದ ಧೂರ್ತನು ಕಂಡು ತ್ರಿ |
ನೇತ್ರನ ತೆರನಾಗಿ ||
ಕತ್ತಿಯ ಧರಿಸುತ ವೇಗದಿ ಆರ್ಭಟಿ |
ಸುತ್ತ ನುಡಿದ ಹರಿಗೆ ||2|| 72 ||

**ಭೈರವಿ - ಏಕ**
ಎಲವೋ ನಿಲ್ಲೆಲೊ ಮಘವ | ಕೊಳು |
ಗುಳದೊಳು ನಿನ್ನಯ ಶಿರವ ||
ಘಳಿಲನೆ ತರಿಯುತ ಸ್ವರ್ಗ | ನಾ |
ನಾಳುವೆ ನೋಡೆಲ ಶೀಘ್ರ ||1|| 73 ||

**ಮಾರವಿ - ಏಕ**
ಹಕ್ಕಿನವರು ನಾ | ವಕ್ಕನ ಮಕ್ಕಳು |
ಸಿಕ್ಕಲೆಬೇಕೆನುತ ||
ಸೊಕ್ಕಲಿ ಬಂದಿಹ | ರಕ್ಕಸರನು ತರಿ |
ದಿಕ್ಕಿಹೆ ಜವಪುರದಿ ||1|| 74 ||

**ಶಂಕರಾಭರಣ - ಏಕ**
ಪಿಂತೆ ಬಂದ ದನುಜನಿಕರ |
ದಂತೆ ಅಲ್ಪನಲ್ಲ ಅಂತ |
ಕಾಂತನಿಂದ ಪಡೆದೆ ಶಕ್ತಿ | ಅಂತ್ಯ ನಿನಗಿದೊ ||1||

ರುಂಡಮಾಲನಿಂದ ವರವ |
ಭಂಡ ಪಡೆದರೇನು ನಿನ್ನ |
ರುಂಡವನ್ನು ಖಂಡಿಸುವೆನು | ಷಂಡನೀಕ್ಷಣ ||2||

ಷಂಡನ್ಯಾರೊ ನೀನು ಋಷಿಯ |
ಹೆಂಡತಿಯನು ಕೂಡಿ ಶಾಪ |
ಗೊಂಡು ಯೋನಿ ಪಡೆದುಕೊಂಡ | ಭಂಡನಲ್ಲವೊ ||3||

ಹೆಣ್ಣುಮಣ್ಣು ನೆವದಿ ಸ್ವರ್ಗ |
ವನ್ನು ಬಯಸಿ ಬಂದೆ ಮೂರು |
ಕಣ್ಣ ನಿನ್ನ ದೇವ ದೊಡ್ಡ | ಹೆಣ್ಣ ಮರುಳನು ||4||

ದೇವನನ್ನು ಜರೆಯಬೇಡ |
ಜೀವ ಕಳೆದುಕೊಂಬೆ ಹೇಡಿ |
ಯಾವ ಕಾಲ ಲಲನೆಮರುಳ | ದೇವ ಪೇಳೆಲಾ ||5|| 79 ||

**ಪಂಚಾಗತಿ - ಮಟ್ಟೆ**
ಹಿಂದೆ ಭಸ್ಮಾಸುರನ ಕೊಲ್ಲ |
ಲೆಂದು ಶ್ರೀಶ ಸ್ತ್ರೀಯ ರೂಪ |
ದಿಂದ ಕೊಂದು ಬರಲು ಕಂಡು | ಇಂದುಧರ ಮದ ||
ದಿಂದ ಮೋಹಿಸಲ್ಕೆ ಓರ್ವ |
ಕಂದ ಜನಿಸಲವನ ವನದಿ |
ಇಂದಿರೇಶನಿರಿಸಿ ಬಂದ | ಹಿಂದೆ ದಾನವ ||1|| 80 ||

**ಶಂಕರಾಭರಣ - ಮಟ್ಟೆ**
ವನವ ಕಾಯಲಿರಿಸಲೇನು |
ಅನಿಮಿಷಧಿಪ ಶಚಿಯ ಪದ್ಮ |
ನನುಜೆ ಎಳೆಯೆ ಕರವ ಕಡಿದು | ಕ್ಷಣದಿ ಕಾಯ್ದನು ||1|| 81 ||

**ಪಂಚಾಗತಿ - ಮಟ್ಟೆ**
ಅಷ್ಟೆಯೊ ಖಟ್ವಾಂಗಸುತೆಯ |
ಕಷ್ಟಹರನ ಸೇವೆಗಿಡಲು |
ದುಷ್ಟನವಳ ಪ್ರೀತಿಸಲ್ಕೆ | ಬೆಟ್ಟನಣುಗೆಯು ||
ಗುಟ್ಟನರಿತು ಸಿಟ್ಟಿನಿಂದ |
ಕೊಟ್ಟಳಾಗ ಶಾಪವನು ನಿ |
ಕೃಷ್ಣಕೋಕ ಆಗೆನುತ್ತ | ತಟ್ಟನಂಜದೆ ||1|| 82 ||

**ಶಂಕರಾಭರಣ - ಮಟ್ಟೆ**
ಎಲವೊ ಮಘವ ನಳಿನನಾಭ |
ಕಾಲನೇಮಿಯಣುಗೆ ವೃಂದೆ |
ಯಳ ವ್ರತವನು ಕೆಡಿಸಿ ಅಂತ್ಯ | ಗಳಿಸಿದಧಮನು ||1|| 83 ||

**ಭೈರವಿ - ಅಷ್ಟ**
ಸುರನಿಕರಕೆ ಕಷ್ಟವ | ಕೊಡಲು ನಾ |
ಹರಹರಿಗೊರೆಯಲವ ||
ರಿರ್ವರು ಸೇರಿ ಜಲಂಧರನಿರಿದರು |
ತರಿಯುವೆ ನಿನ್ನನೀಗ ||1||

ಎಂದ ಮಾತನು ಕೇಳುತ | ದೈತ್ಯನು ಖತಿ |
ಯಿಂದ ತೋರಿಸು ಸಾಮರ್ಥ್ಯ ||
ವೆಂದೊಂದು ಶರ ಬಿಡೆ ಇಂದ್ರನು ಖಂಡಿಸಿ |
ನಿಂದನು ನಸುನಗುತ ||2||

ಪುನರಪಿ ಅನಲಸ್ತ್ರವ | ಬಿಡಲು ಕಂಡು |
ಕ್ಷಣದಿ ತುಂಡಿಸಿ ಮಘವ ||
ಅನಿಲವ ಸುರಿಸಲು ದನುಜನು ಕಡಿಯುತ |
ಕಣೆಬಿಡೆ ಬಿದ್ದ ಶಕ್ರ ||3||86 ||

**ಶಂಕರಾಭರಣ - ಏಕ**
ಸುರಪನನ್ನು ಜೈಸಿ ಬಳಿಕ |
ಸುರರ ಗೆಲಿದು ಜಯವನಿತೆಯ |
ವರಿಸಿ ಮೆರೆದನಾಗ ದುರುಳ | ಹರುಷದಿಂದಲಿ ||1||

ಭರದಿ ಬಂದು ನಾಕ ಸೇರಿ |
ಮೆರೆವ ಸಿಂಹಾಸನವನೇರಿ |
ಅರುಹಲೈದುತಚ್ಚರಿಯರು | ನಲಿದರಾಗಲೆ ||2|| 88 ||

**ಸೌರಾಷ್ಟ್ರ - ತ್ರಿವುಡೆ**
ಭೇರಿಯನು ಹೊಡೆಸಿದನು ನಾಕಕೆ |
ದೊರೆಯು ಮುಂದಕೆ ನಾನೆ ನುಡಿಯನು |
ಮೀರಿ ನಡೆದರೆ ಜತನವೆನ್ನುತ | ಒರೆದ ಖೂಳ ||1||

ಸುರಪತಿಯು ಕರೆದೆಂದ ಸ್ವರ್ಗದಿ |
ಹರುಷದಿರು ನೀ ಕಾಲ ಕಾಲಕೆ |
ಕರವನೆನಗೊಪ್ಪಿಸುತ ಮಾತನು | ಮೀರಬೇಡ ||2||

ಎಂದು ನಂಬುಗೆ ಪಡೆದು ದಾನವ |
ಬಂದು ಪುರದಲಿ ಚಂದದಿರೆ ದೇ |
ವೇಂದ್ರ ತನಗೊದಗಿರ್ದ ದುರಿತವ | ನೆಂದ ನೆನೆದು ||3|| 91 ||

**ಸಾಂಗತ್ಯ - ರೂಪಕ**
ಹರಹರ ಯಾರೊಡನುಸುರಲೀ ಕಷ್ಟವ |
ಪರಿಹರಿಸುವರು ಯಾರಿಂದು ||
ಧುರುಳಸೂಧನನ ಅಡಿಯಾಳಾಗಿ ಬಾಳಲು |
ಸರಸಿಜೋದ್ಭವ ಬರೆದನಯ್ಯೋ ||1||

ಆರೇನಮಾಡುವುದಾರಿಂದಲೇನಹುದು |
ಪೂರ್ವಜನ್ಮದ ಕರ್ಮಗುಣವು ||
ಆರ ಬಿಟ್ಟಿಹುದು ಶಾರದೆವರನೊಡನಿದ |
ದೂರುವೆನೆನುತ ಸಾರಿದನು ||2||

ಬಂದು ಬ್ರಹ್ಮನ ಪದದ್ವಂದ್ವಕೊಂದಿಸಿ ಸದಾ |
ನಂದ ನೊಂದೆನು ಶ್ರೀಶಕಂದ ||
ಬಂದ ಬವಣೆಯಿಂದ ಇಂದು ಕಾಪಾಡೆಂದು |
ಚಂದದಿ ನುಡಿದ ದೇವೇಂದ್ರ ||3|| 94 ||

**ಬೇಗಡೆ - ಏಕ**
ಅಡಿ ಕಡಿದ ಗಿಡದಂದದಡಿಗೆಡದ | ಬಿಡುಗಣ್ಣರೊಡೆಯನ |
ಜಡಜರುಹ ಪಿಡಿದೆತ್ತಿ ಮುದದಿಂದ ||
ತಡವರಿಸಿ ಪರಿ | ಅಡಿಯ ನಿನಗೀ |
ಗಡಸಿದೆಡರೆಡೆ | ಬಿಡದೆ ಪೇಳೆಂ |
ದೊಡನೆ ಕಡವಳ | ರೊಡೆಯ ನುಡಿದನು |
ದಡಿಗನಿಂದವ | ಗಾದ ತಡೆಯನು ||1|| 95 ||

**ಮಧುಮಾಧವಿ - ಏಕ**
ಖೂಳ ದಾನವಮೂಲಕಾಲ ಶ್ರೀಲೋಲ |
ಬಾಲ ಪೇಳುವೆ ಎಮಗಾದ ಕಂಗಾಲ ||
ಶೂಲಿಯೊಳ್ ಶತ್ರುಸೂಧನ ವರ ಪಡೆದು |
ಧಾಳಿಗೈಯುತಲೆಮ್ಮ ಗೆಲಿದನು ಇಂದು ||1|| 96 ||

ಹಾದಿ ಯಾವುದು ಕಾಣೆ ಬದುಕುವುದ್ಯಾಗೆ |
ಮೋದದಿ ಬಂದೆ ನಿನ್ನಯ ಪಾದದೆಡೆಗೆ ||
ಸಾಧನೆಯಲಿ ಪ್ರಸೂಧನನನ್ನು ಕೊಲಿಸು |
ಹೇ ದಯಾನಿಧಿ ನಿನ್ನ ಭಜಕರನುಳಿಸು ||1|| 97 ||

**ಮಧುಮಾಧವಿ - ತ್ರಿವುಡೆ**
ಅವಧರಿಸು ಪುರುಹೂತ ಲಕ್ಷ್ಮೀ |
ಧವನೊಡನೆ ದೂರಿಡಲು ಖೂಳನ ||
ಜವದಿ ವಧಿಸುತ ಕಾವ ನಾವ್ ಪೋ |
ಗುವದವನ ಬಳಿಗೆಲ್ಲರು ||1|| 98 ||

**ಕಾಂಭೋದಿ - ಝಂಪೆ**
ಜಡಜವಂಶಜ ಕೇಳು | ಜಡಜಭವ ನುಡಿಯೆ ಸುರ |
ರೊಡೆಯ ಅಜನೊಡನೆ ಕ್ಷೀರ ||
ಕಡಲತಡಿಗತಿ ಮುದದಿ | ದಡಿಗಕುಲ ಅಂತಕನ |
ಅಡಿಗಡಿಗೆ ಸ್ತುತಿಸಿ ಪೊರಟ ||1||

ಅತ್ತ ಹರಿ ವೈಕುಂಠ | ಪತ್ತನದಿ ಸಿರಿಯೊಡನೆ |
ಅರ್ತಿಯಲಿ ಮೆರೆದಿರಲು ಲಕ್ಷ್ಮಿ ||
ಚಿತ್ತಜಯ್ಯನಿಗೊಂದಿ | ಸುತ್ತ ಪೇಳ್ದಳು ತನ್ನ |
ಚಿತ್ತದುದ್ಭವಿಸಿದಭಿಮತವ ||2|| 100 ||

**ಬೇಗಡೆ - ತ್ರಿವುಡೆ**
ಏನ ಬಣ್ಣಿಪೆ ಪತಿಯೇ | ಗೈದಧಟನಾ |
ನೇನ ಬಣ್ಣಿಪೆ ಪತಿಯೇ ||
ಏನೆನುವೆ ಗೀ | ರ್ವಾಣನುತ ತ್ರೈ |
ಕ್ಷೋಣಿಯಲಿ ಎಣೆ | ಗಾಣೆ ತಮ್ಮ ಪ್ರ |
ವೀಣತೆಗೆ ಶಿವ | ನಾಣೆ ನಿಮ್ಮಯ |
ರಾಣಿಯಾಗಿಹ | ನಾನೆ ಧನ್ಯಳು ||1||

ಕುಂದಕುಟ್ಮಲರದನ | ಮತ್ಸ್ಯಾವತಾರ |
ದಿಂದ ತರಿದೆ ಸೋಮನ ||
ಮಂದರಾದ್ರಿಯ | ಕುಂದದೆತ್ತುತ |
ಹಂದಿ ನರಹರಿ | ಯಂದ ರೂಪವ ||
ಪೊಂದಿ ಕಶ್ಯಪ | ನಂದನರ ಖತಿ |
ಯಿಂದಿರಿದು ವಟು | ವೆಂದೆನಿಸಿ ಮದ ||
ದಿಂದ ಮೆರೆವ ಮ | ದಾಂಧ ಬಲಿಯ ವ |
ಸುಂಧರೆಗೆ ಪದ | ದಿಂದಲೊತ್ತಿ ಸು |
ರೇಂದ್ರ ಸುಮನಸ | ವೃಂದ ಪೊರೆದುದ |
ನಿಂದೆಣಿಸಿ ಮುದ | ದಿಂದ ಪೊಗಳಿದೆ ||2|| 102 ||

**ಕಂದ**
ಸರಸಿರುಹದಳ ಲೋಚನೆಯು |
ಎರೆಯನ ಶ್ಲಾಘಿಸುತಿರೆ ಸಿರಿಯರಸನ ಕರದೊಳ್ ||
ಇರುವ ಸುದರುಶನ ಕೇಳುತ |
ಕಿರುನಗೆಯ ಬೀರುತೆದ್ದಿಳಿದು ಕರಮುಗಿದೆಂದ ||1|| 103 ||

**ಸೌರಾಷ್ಟ್ರ - ಅಷ್ಟ**
ಲಾಲಿಪುದೆಲೆ ತಾಯೆ ಎನ್ನರಿಕೆಯನೊಂದ || ಲಕ್ಷ್ಮೀದೇವಿ || ನಿಮ್ಮ|
ಲೋಲನ ಪೊಗಳುತಲಿರುವುದು ಸಹಜವು || ಲಕ್ಷ್ಮೀದೇವಿ ||1||

ಸಾರಸನಾಭನ ಮೂರು ಲೋಕದಿ ಬಲು || ಲಕ್ಷ್ಮೀದೇವಿ || ಎಲ್ಲಾ |
ರಾರಾಧಿಸುತ ಮನ್ನಣೆಗಳನೀವರು || ಲಕ್ಷ್ಮೀದೇವಿ ||2||

ಘೋರ ದಾನವರೆಲ್ಲ ಬವರಕ್ಕೆ ಬಂದರೆ || ಲಕ್ಷ್ಮೀದೇವಿ || ನಾನು |
ಸೇರಿಕೊಂಡುದರಿಂದ ಸರ್ವಕ್ಕು ಕಾರಣ || ಲಕ್ಷ್ಮೀದೇವಿ ||3|| 106 ||

**ಕೇದಾರಗೌಳ - ಅಷ್ಟ**
ಮುಚ್ಚು ಮುಚ್ಚೆಲೊ ಬಾಯ ಕಿಚ್ಚಿನ ವಾಣಿಯ |
ಕೊಚ್ಚದಿರೆನ್ನೊಡನೆ ||
ಅಚ್ಯುತಗಿಂತ ನೀನಚ್ಚುವೀರನೊ ನಿನ್ನ |
ಹೆಚ್ಚಿಗಾಯಿತು ಕಂಡುದು ||1|| 107 ||

**ಸೌರಾಷ್ಟ್ರ - ಅಷ್ಟ**
ಕಂಡುದ ನುಡಿದರೆ ಕೆಂಡದಂತಹ ಸಿಟ್ಟು || ಲಕ್ಷ್ಮೀದೇವಿ || ನಿಮ್ಮ |
ಗಂಡ ನಾನಲ್ಲದಿರ್ದಡೆ ದಂಡ ಖಂಡಿತ || ಲಕ್ಷ್ಮೀದೇವಿ ||1|| 108 ||

**ಕೇದಾರಗೌಳ - ಅಷ್ಟ**
ಸರಿಸರಿ ರಮಣನು ಮತ್ಸ್ಯ ವರಹ ಕೂರ್ಮ |
ನರಸಿಂಹ ರೂಪವನು ||
ಧರಿಸಿ ದಾನವರನ್ನು ತರಿವಾಗ ನೀನೆಲ್ಲಿ |
ತೆರಳಿ ಅಡಗಿರ್ದೆ ಪೇಳು ||1||

ಮತ್ಸ್ಯನ ರೆಕ್ಕೆಯೊಳ್ಕೂರ್ಮನ ಚಿಪ್ಪಿನೊಳ್ |
ಪೃಥ್ವಿದಾರನ ದಂತದೊಳ್ ||
ಮತ್ತೆ ಮನುಜ ಹರಿಯುಗುರೊಳಗಿರ್ದು ನಾ |
ನಿತ್ತೆ ಸಹಾಯವನು ||2||

ಅರುಹಿದ ನುಡಿಕೇಳುತರಸನೊಳಹುದೆ ಎಂ |
ದೊರೆಯಲು ಮಾಧವನು ||
ಅರಸಿಯ ಸಂತವಿಸುತ್ತ ಸುದರ್ಶನ |
ಗೊರೆದನು ನಸುನಗುತ ||3|| 111 ||

**ಮಧುಮಾಧವಿ - ತ್ರಿವುಡೆ**
ಸಹಜವಹುದೀವಾಣಿ ನಿನ್ನಂ |
ತಹ ಪರಾಕ್ರಮಿ ಭುವನ ಮೂರರೊ ||
ಳಿಹರೆ ಸುರ ಅಸುರರೊಳು ಪರಿಕಿಸೆ |
ಬಹುದು ಬಹುಮತ ನಿನಗೆಯೆ ||1||

ಹಿಂದೆ ಎಣಿಕೆಗೆ ಬಾರದಸುರರ |
ವೃಂದವನು ಕೊಂದೀರ್ಪೆನಗೆ ನಿ ||
ನ್ನಿಂದ ಲಭಿಸಿದ ನೆರವ ವರ್ಣಿಸ |
ಲಿಂದಸಾಧ್ಯವು ಶೇಷಗೆ ||2|| 113 ||

**ಭಾಮಿನಿ**
ಅಂಬುಜಾಕ್ಷ ಸುದರ್ಶನನ ಕಡು |
ಸಂಭ್ರಮದಿ ಪೊಗಳಲ್ಕವಗೆ ನಾ |
ನೆಂಬುದಡರಲು ಸಂತವಿಸಿ ಬೀಳ್ಕೊಟ್ಟು ಬಳಿಕ ಹರಿ ||
ಅಂಬುಜಾನನೆಗೆಂದನೀತನ |
ಜಂಬವನು ಛೇದಿಸುವ ಹೊತ್ತಾ |
ರಂಭವಾಯ್ತೆನೆ ಸುರಪ ಅಜನೊಡ ಬಂದು ನುತಿಸಿದನು ||1|| 114 ||

**ಕುಸುಮ ಷಟ್ಪದಿ**
ಜಯತುಜಯ ಮಧುಮಥನ |
ಜಯತುಜಯ ಮುನಿಪಾಲ |
ಜಯತುಜಯ ಜಯ ಜಯತು ಗುಣಶೀಲನೆ ||
ಜಯತುಜಯ ಖಗಗಮನ |
ಜಯತುಜಯ ಅಗಧರನೆ |
ಜಯತುಜಯ ಜಯ ಜಯತು ನಾಗಶಯನ ||1||

ಜಯತುಜಯ ಜಲಜಾಕ್ಷ |
ಜಯತುಜಯ ಖಳಶಿಕ್ಷ |
ಜಯತು ಸತ್ಯಚರಿತ್ರ ಜಯತು ಶ್ಯಾಮಲಗಾತ್ರನೆ ||
ಜಯತುಜಯ ಗೋವಿಂದ |
ಜಯತುಜಯ ನರಸಿಂಗ |
ಜಯತುಜಯ ಜಯಜಯತು ಸಲಹೆಮ್ಮನು ||2|| 116 ||

**ಮಧ್ಯಮಾವತಿ - ತ್ರಿವುಡೆ**

ಕರುಣನಿಧಿ ಬಾರೆಂದು ನುತಿಸುವ |
ಸ್ವರವ ಕೇಳುತ ಬೇಗ ಸಿರಿವರ |
ಉರಗತಲ್ಪವ ತ್ಯಜಿಸಿ ಸತಿಸಹ |
ಹರುಷದಲಿ ಮೈದೋರುತ | ನುಡಿದ ನಗುತ ||1|| 117 ||

**ಮಧುಮಾಧವಿ - ತ್ರಿವುಡೆ**

ಆರರೆ ಏನಚ್ಚರಿಯು ಸುರಪತಿ |
ಸರಸಿರುಹಭವನೊಡನೆ ಕ್ಷೀರ |
ಶರಧಿತಟಕೈತಂದು ನುತಿಸುವ |
ಪರಿಗಳರುಹೈ ಎನ್ನೊಳು ||1||

ಆನನವು ಕಂದಿಹುದು ನಿನಗಿಂ |
ದೇನು ಹಾನಿಗಳೊದಗಿತೈ ನಿ |
ಧಾನಿಸದೆ ನುಡಿ ಎನಲು ಶ್ರೀಹರಿ |
ಸೂನು ನುಡಿದನು ಬವಣೆಯ ||2|| 119 ||

**ಕಲ್ಯಾಣಿ - ಅಷ್ಟ**

ಕೇಳಯ್ಯ ಲಕ್ಷ್ಮೀಲೋಲ | ದೇವತೆಗಳ |
ಪೇಳುವೆ ಕಷ್ಟಗಳ ||
ಖೂಳ ಶತ್ರುಪ್ರಸೂಧನನು ಆ |
ಭಾಳನೇತ್ರನ ವರದ ಬಲದೊಳು |
ಮೇಲುಲೋಕಕೆ ಧಾಳಿಗೈಯುತ |
ಸೋಲಿಸುತಲೋಡಿಸಿದನಿವರನು ||1|| 120 ||

**ಬೇಗಡೆ - ಏಕ**

ಬಂದು ವಂದಿಸಿ ಪೇಳ್ದರೆನ್ನೊಡನೆ | ನಾ ನಿನ್ನಬಳಿ ಕರ |
ತಂದೆ ತಂದೆಯೆ ಮಂದಮತಿಯನ್ನೆ ||
ಕೊಂದು ದುರಿತದ ಬಂಧನದಿ ಬಿಡಿ |
ಸಿಂದು ನಾಕವನೊಪ್ಪಿಸುತ ಮೊದ |
ಲಂದ ಪೊರೆ ಗೋವಿಂದ ಅನಿಮಿಷ |
ವೃಂದವನು ಗುಣ | ಸಿಂಧು ಜವದಲಿ ||1|| 121 ||

**ಸುರುಟಿ - ಏಕ**

ಸುರಪತಿ ಮತ್ತೆಂದ | ಪೂರ್ವದಿ |
ಪೊರೆದಿಹೆ ಸುತರಂದ ||
ದುರುಳರುಪಟಳದೋ| ಳಿರುವರೆ ಕಷ್ಟವು |
ತ್ವರದಿ ಕೊಂದು ಭಕು | ತರ ಕಾಯೋ ಹರಿ ||1|| 122 ||

**ಸೌರಾಷ್ಟ್ರ - ತ್ರಿವುಡೆ**
ಏಳಿರೈ ಸುರಪಾಲ ನಳಿನಜ |
ರೇಳಿ ನೀವಂಜದಿರಿ ಖಳನೆಮ |
ನಾಲಯಕೆ ನಾ ಕುಟ್ಟಿ ಕಳುಹುವೆ | ತಾಳಿ ಧೈರ್ಯ ||1||

ಆದುದಾಗಲಿ ರೋದಿಸಲು ಫಲ |
ವಾದರೇನಿಹುದೆಲ್ಲ ತೆರಳಿರಿ |
ಸಾಧನೆಯೊಳಾಕಾರ್ಯಗಳಿಪೆನೆ | ಪೋದರೆಲ್ಲ ||2||

ನಾಕಪತಿಮತ್ತ್ರಜನು ತೆರಳಲು |
ಕಾಕುಖಳರಿಪುಲೋಕಪತಿತ |
ನ್ನೇಕಭಕ್ತನ ಮದವ ಮುರಿವ ಸು | ಕಾಲವೆಂದ ||3|| 125 ||

**ಮಾರವಿ - ಏಕ**
ಧೂರ್ತರ ಕತ್ತನು ಕೆತ್ತಿದ ಪಿತ್ತವು |
ಹತ್ತಿದೆ ಮಸ್ತಕಕೆ ||
ಹೊತ್ತ ಬಿಡಲು ಮುಂದೊತ್ತುವ ನೆತ್ತಿಗೆ |
ಕಿತ್ತುಬಿಡುವೆ ಕ್ಷಣದಿ ||1|| 126 ||

**ಸೌರಾಷ್ಟ್ರ - ತ್ರಿವುಡೆ**
ಎಂದುಸುರುತರಸಿಯನು ಒಡಬಡಿ |
ಸಿಂದು ಚಕ್ರವ ತ್ಯಜಿಸಿ ವಿನತೆಯ |
ಕಂದನೇರುತ ಧನುವ ಧರಿಸುತ | ಬಂದನಾಗ ||1|| 127 ||

ಬಂದು ಮಹಲೋಹವತಿಪುರ ಹೊರ |
ನಿಂದು ಶಂಖವನೂದಲಾಗ ವ |
ಸುಂಧರೆಯು ಗಡಗಡನೆ ನಡುಗೆ ಕೃ | ಶಾಂತತನಯ ||1||

ತಿರೆಯು ಕಂಪಿಸೆ ಖಳನ ಎದೆ ಜ |
ಜ್ಜರಿಯೆ ಕೆಲ ದಾನವರು ಮಡಿಯಲು |
ಅರಸ ಕಂಡಾಶ್ಚರ್ಯಪಡುತಲಿ | ಭರದೊಳೆದ್ದು ||2|| 129 ||

**ಮಾರವಿ - ಏಕ**
ಭಳಿರೆ ಶಭಾಸುರೆ ಬಂದನೆ ನರಹರಿ |
ಘಳಿಲ ಜಾಲವಿದ್ಯೆ ||
ಗಳ ನಿಲಿಸುವೆನೆನುತಾರ್ಭಟಿಸುತ ಖಳ |
ಅಳವಿಗೆ ಅಣಿಯಾಗೆ ||1|| 130 ||

**ಸೌರಾಷ್ಟ್ರ - ತ್ರಿವುಡೆ**
ಅಷ್ಟರೊಳಗರಿವುತ್ತ ದುಷ್ಟನ |
ಪಟ್ಟದಂಗನೆ ಗುಟ್ಟರಿದು ಪೊಡ |
ಮಟ್ಟು ತಡೆಯುತ ಪೇಳ್ದಳಾಗ | ಕರವ ಮುಗಿದು ||1|| 131 ||

**ನೀಲಾಂಬರಿ - ಏಕ**
ಸ್ವಾರಿ ಎಲ್ಲಿಗಿಂದು ಎನ್ನ ಪ್ರಾಣಕಾಂತ |
ಭೂರಿ ತೋಷದಿಂದ ಪೇಳಿರೆನ್ನೊಳ್ ಪ್ರಾಣಕಾಂತ ||
ಆರೊಳ್ಪವರಕಿಂದು ನೀವು ಪ್ರಾಣಕಾಂತ | ರೌದ್ರ |
ವೇರಿ ಪೋಪ ಹದನವರುಹಿ ಪ್ರಾಣಕಾಂತ ||1|| 132 ||

**ಕೇದಾರಗೌಳ - ಅಷ್ಟ**
ಅರಸಿ ಕೇಳ್ ಶ್ರೀಹರಿಯೊಡನೆ ಕಾಳಗಕಾಗಿ |
ತೆರಳುವೆ ಶೀಘ್ರದಲ್ಲಿ ||
ಧುರದೊಳಾತನ ಕೊಂದು ಜಯ ಭಾಮಿನಿಯ ದರ |
ದರನೆಳೆತರುವೆ ಕಾಣು ||1|| 133 ||

**ಶಂಕರಾಭರಣ - ಏಕ**
ನಲ್ಲ ಸುಲಭವಲ್ಲ ಹರಿಯ |
ಗೆಲ್ಲುವಾಶೆ ಬಿಡಿರಿ ಯುದ್ಧ |
ದಲ್ಲಿ ಖೂಳಕುಲವ ತರಿದು | ದೆಲ್ಲ ಬಲ್ಲಿರಿ ||1|| 134 ||

**ಕೇದಾರಗೌಳ - ಅಷ್ಟ**
ಬಲ್ಲೆಬಲ್ಲೆನು ಪುಲ್ಲನಾಭ ತನ್ನಯ ರೂಪ |
ಪಲ್ಲಟಗೈದು ಖಳ ||
ರೆಲ್ಲರ ಕಳ್ಳರಂದದಿ ಮೋಸದಿರಿದಿಹ |
ಸೊಲ್ಲದಿರಾನುಡಿಯ ||1|| 135 ||

**ಸೌರಾಷ್ಟ್ರ - ತ್ರಿವುಡೆ**
ಹಿಂದೆ ಮಧುಕೈಟಭರ ಕೊಂದು ವ |
ಸುಂಧರೆಯ ಸೃಜಿಸಿದನು ಭಾರವ |
ನಿಂದು ಕಳೆಯುವ ಬೂದಿ ಮುಚ್ಚಿದ | ಕೆಂಡನವನು ||1||

ಬಾಲೆ ನೀ ಬೆದರದಿರು ಲಕ್ಷ್ಮೀ |
ಲೋಲನನು ಸೋಲಿಸುವ ಶಕ್ತಿಯ |
ಫಾಲಲೋಚನನಿಂದ ಪಡೆದಿಹೆ | ತಾಳು ಧೈರ್ಯ ||2|| 137 ||

**ಭಾಮಿನಿ (ಅರ್ಧ)**
ನೀತಿಯಲ್ಲವಿದೆನ್ನ ಪತಿ ಪಾ |
ರ್ವತಿಯವಲ್ಲಭ ಮುನಿವ ನಿಮ್ಮೊಳು |
ಖಾತಿ ಬೇಡೈ ಹರಹರಿ ಹರಿಕ್ಷೀರದೆರಕಿಹರು ||1|| 138 ||

**ಮಾರವಿ - ಏಕ**
ಅಂಗಜಪಿತ ಮೇಣ್ | ಗಂಗಾಧರ ರಣ |
ರಂಗಕೆ ಮುಂಬರಲು ||
ಹಿಂಗದೆ ರೌದ್ರದಿ ಭಂಗಿಸದೈತಹೆ |
ನಂಗನೆ ನೀ ತೆರಳು ||1||

ಎನುತಲಿ ದನುಜನು | ಕಣೆಗಳ ಧರಿಸುತ |
ಕ್ಷಣದೊಳು ಪುರಹೊರಗೆ ||
ಕಿನಿಸಿನೊಳಿಹ ಹರಿ | ಯನು ಕಾಣುತ ನುಡಿ |
ದನು ಗರ್ಜಿಸುತವಗೆ ||2|| 140 ||

**ಭೈರವಿ - ಏಕ**
ಬಂದೆಯ ಎಲ ಮಸಿವರ್ಣ | ಶರ |
ಒಂದರೊಳ್ ತೆಗೆವೆನು ಹರಣ ||
ಬಂದಿಹ ಪರಿಗಳ ಪೇಳು | ಹರಿ |
ನಂದನ ಕಾಯ್ವಿಹ ತಾಳು ||1|| 141 ||

**ಮಾರವಿ - ಏಕ**
ಹರನಿಂದೊರವನು ಪಡೆಯುತ ಸುರರನು |
ಧುರದಲಿ ಗೆಲಿದಿಹೆಯ ||
ಸರುವಥ ತಪ್ಪೆಂದೊರೆಯುತ ಚರಣಕೆ |
ಶರಣಾಗದೆ ಬಿಡೆನು ||1|| 142 ||

**ಕೇದಾರಗೌಳ - ಅಷ್ಟ**
ನಕ್ಕು ದಾನವನೆಂದ ರಕ್ಕಸಾರಿಯೆ ನಿನ್ನ |
ಠಕ್ಕು ಠೌಳಿಯ ವಿದ್ಯೆಗೆ ||
ಫಕ್ಕ ಸಿಕ್ಕೆನು ಈಗ ಸೊಕ್ಕ ಮುರಿದು ಭೂತ |
ಕಿಕ್ಕುವೆ ಔತಣವ ||1|| 143 ||

**ಮಾರವಿ - ಏಕ**
ಕುನ್ನಿ ಸಮಾನನೆ ನಿನ್ನಂತಧಮರ |
ಗಣ್ಯ ತರದೆ ರಣದಿ ||
ಮಣ್ಣ ತಿನಿಸಿ ಬಿಡುಗಣ್ಣರ ಪೊರೆದಿಹೆ |
ಎನ್ನೊಳು ಗಳಹದಿರು ||1|| 144 ||

ನುಡಿದಿಹ ಮಾತನು ದಡಿಗನು ಕೇಳುತ |
ಖಿಡಿಖಿಡಿಯಾಗುತಲಿ ||
ಕಡಿಯುವೆ ರುಂಡವ ತಡೆಯೆನ್ನುತ ಶರ |
ಗಡಣವ ಸುರಿಸಿದನು ||2|| 145 ||

**ಭೈರವಿ - ಏಕ**
ಬಿಟ್ಟ ಶರವ ಶ್ರೀಪತಿಯು | ತರಿ |
ದಟ್ಟುತ ಪುನ ಕಣೆತತಿಯೊ ||
ಛಚ್ಯುತನಾತನ ಬಿಲ್ಲ | ಭೋ |
ರ್ಗುಟ್ಟುತ ಕಡಿದನು ಮಲ್ಲ ||1||

ಹೊಸಬಿಲ್ಲನು ಖಳ ಪಿಡಿದು | ಮ |
ತ್ತೆಸೆದನು ವಿಶಿಖವ ಮುನಿದು ||
ಬಿಸುಟಸ್ತ್ರವು ಬರೆ ಕಡೆಗೆ | ಹರಿ |
ಬಸವಳಿದೋಡಿದ ಮನೆಗೆ ||2|| 147 ||

**ಭಾಮಿನಿ**
ಅರಸ ಲಾಲಿಸು ಸಾರಸಾಕ್ಷನ |
ಥರಥರದ ಶರ ಹೂಡುತಸುರನು |
ಧುರದಿ ಗೆಲಿದರಮನೆಯ ಸೇರುತಲಮಿತ ಭೋಗದಲಿ ||
ಮೆರೆಯುತಿರಲಿತ್ತಂಬುಜಾಕ್ಷ ಸು |
ದರುಶನನ ಗರುವವನು ಮುರಿವೆಂ |
ದರಿಯದವರಂತಿರುತ ಪುರದಲಿ ಚಿಂತಿಸುತ ನುಡಿದ ||1|| 148||

**ಸಾಂಗತ್ಯ - ರೂಪಕ**
ಏನ ಮಾಡಲಿ ಶಕ್ತಿಹೀನನಾದೆನು ಖಳನ |
ಗೋಣನರಿಯದೆ ಹೋದೆನಿಂದು ||
ಮಾನವೆಲ್ಲವು ಹೋಯ್ತು ದಾನವನೊಳು ಧುರ |
ತಾನಿತ್ತು ಹಾನಿಯು ಜಗಕೆ ||1||

ಯಾರಿಂದ ಕೊಲಿಸಲಿ ಯಾರು ಕೊಲುವರಿಂದು |
ಸಾರಸಾಕ್ಷನು ಸೋತ ಮೇಲೆ ||
ಯಾರಿರ್ಪರೆಂದೆನುತಿರಲು ಸುದರ್ಶನ |
ಭೋರನೆ ಪದಕೆರಗುತೆಂದ ||2|| 150 ||

**ಮಾರವಿ - ಏಕ**
ಚಿತ್ತಜಪಿತ ಪುರುಷೋತ್ತಮ ಚಿಂತೆಯ |
ದ್ಯಾತಕೆ ಕರ್ಬುರನ ||
ಕತ್ತನು ಕತ್ತಿಲಿ ಕೆತ್ತುತ ಜಯವಧು |
ಯತ್ನದೊಳೆಳೆತರುವೆ ||1||

ಸುಡುವೆನು ಜಗವನು ಬಡಿವೆನು ಜವನನು |
ಕಡಲಡಿ ಪುಡಿಗೈವೆ ||
ದಡಿಗಡಿ ಲೋಕದೊಳಡಗಲು ಬಿಡೆ ಕಡಿ |
ದಿಡುವೆನು ಅಡಿ ಪದದಿ ||2||

ಮುಕ್ಕಣ್ಣಾಸುರನ ಪಕ್ಷದೊಳೈತರೆ |
ಲೆಕ್ಕಿಸುವೆನೆ ಎನ್ನ ||
ಪಕ್ಕ ತ್ಯಜಿಸಿ ಹೆಣಭಕ್ಷಕನಲಿ ನೀ |
ಸಿಕ್ಕಿದೆಯಪಜಯದಿ ||3||

ಬಿಡು ಅನುಮಾನವ ಕೊಡು ಅಪ್ಪಣೆಯೆಂ |
ದಡಿಗೆರಗುತ ನುಡಿದ ||
ಅಡಿಯನ ಶಿರದೆಡ ತಡವರಿಸುತ ಹರಿ |
ಒಡನೆಯೆ ಕಳುಹಿಸಿದ ||4|| 154 ||

**ಸೌರಾಷ್ಟ್ರ - ತ್ರಿವುಡೆ**
ಪೊಡವಿಪತಿ ಕೇಳ್ ಹರಿಯೊಳಪ್ಪಣೆ |
ಪಡೆದು ತೇಜೋರೂಪ ತಾಳುತ |
ಕಡೆಯ ಭೈರವನಂತೆ ಬರುತಿರೆ | ನಡುಗೆ ಧರೆಯು ||1||

ಬರಬರುತಲುರಿವಗ್ನಿ ಶರವನು |
ದುರುಳನರಮನೆಗೆಸೆಯೆ ಕೋಟೆಯು |
ಉರಿವ ಪರಿಯನು ಕಂಡು ಚಾರಕ | ರರುಹೆ ಖಳಗೆ ||2|| 156 ||

**ಮಾರವಿ - ಏಕ**
ದೂತರ ಮಾತನು ದಾತನು ಕೇಳುತ |
ಪ್ರೇತಪತಿಯ ತೆರದಿ ||
ಖಾತಿಯ ತಳೆಯುತ ಆಯುಧ ಧರಿಸುತ |
ರಥವೇರುತ ಬಂದ ||1||

ಬರುತರಮನೆ ಹೊರ ಉರಿಯುವ ಅಗ್ನಿಯ |
ಹರಿಯೊಳು ತಣಿಸಿ ಖಳ ||
ಮೆರೆಯುವ ಅರಿಯೊಡನೊರೆದನು ಗರ್ವದಿ |
ಹರಿತೆರ ಗರ್ಜಿಸುತ ||2|| 158 ||

**ಭೈರವಿ - ಅಷ್ಟ**
ಆರು ನೀನೆಲೊ ವೀರನೆ | ಬಂದಿಹ ಪರಿ |
ಭೋರನುಸಿರು ಮೂಢನೆ ||
ಘೋರಾಗ್ನಿ ಶರವೇಕೆ ಎಸೆದೆಯೊ ಪುರದೆಡೆ |
ಚೋರರಂದದಿ ಘಮ್ಮನೆ ||1||

ಶತ್ರುಸೂದನನೊ ನೀನು | ರಣದಿ ನಿನ್ನ |
ಸತ್ವವ ನಿಲಿಸುವೆನು ||
ಚಿತ್ರಜಪಿತ ಮಾಧವನ ಕರದಿ ಯಾ |
ವತ್ತು ಇರುವ ಚಕ್ರವು ||2||

ಯಾತಕೆನ್ನೊಳು ಜಗಳ | ನಿನ್ನಯ ನಾಥ |
ಸೋತು ಪೋಗಿಹನಾಗಲೆ ||
ಪಾತಕಿ ಖಡ್ಗಕೆ ಗಳವೀಯಬೇಡೆಲೊ |
ಪ್ರೀತಿಯೊಳುಸುರುವೆನು ||3||

ಸಾವಧಾನದಿ ಪೇಳುವೆ | ಎನ್ನಯ ಕೈಲಿ |
ಸಾವುದು ನೀನುಚಿತವೆ ||
ದೇವತೆಗಳ ನಾಕ ಅವರಿಗೊಪ್ಪಿಸಿ ಬೇಗ |
ಜೀವವ ಉಳಿಸಿಕೊಳ್ಳು ||4||

ಬಿಡುಗಣ್ಣರೆಡೆಯೊಳ್ ನೀನು | ಮಾತಾಡಲು |
ಪಡೆದಿಹ ಬಂಧುವೇನೊ ||
ಕಡೆಗಾಲಕೆ ನಿನಗಡಸಿದ ಬುದ್ಧಿಯು |
ನುಡಿಯದೋಡುವುದೊಳ್ಳಿತು ||5|| 163 ||

**ಮಾರವಿ - ಏಕ**
ಸ್ಮರಹರನೊಲಿಸುತ ಶಕ್ತಿಯ ಪಡೆದುದ |
ಅರಿತಿಹೆ ನಿನ್ನಂಥ ||
ದುರುಳರ ಪೂರ್ವದಿ ತರಿದುದ ನೀನೇ |
ನರಿತಿಹೆ ಧುರಕೊದಗು ||1||

ಬಿಡುಬಿಡು ನಿನ್ನಯ ಬಡಿವಾರಂಗಳ |
ತೊಡು ಶರ ತಡವೇಕೆ ||
ನುಡಿಯುತ ದಡಿಗನು ತಡೆಯೆನುತಲಿ ಕಣೆ |
ಕಡಣವನು ಸುರಿದನು ||2|| 165||

**ಭೈರವಿ - ಅಷ್ಟ**
ಎಚ್ಚ ಬಾಣವ ತರಿದಾಗ | ಸುದರ್ಶನ |
ನುಚ್ಚೈಸಗುತಲಿ ಬೇಗ ||
ಕಿಚ್ಚಿನಂತೆಸೆವ ನಾಲ್ಕೈದು ಬಾಣಂಗಳ |
ನಚ್ಚರದಿಂದೆಸೆದ ||1|| 166 ||

**ಭೈರವಿ - ಏಕ**
ಬರುವ ಕಣೆಯ ಖಳ ಕಂಡು | ಹರಿ |
ಶರದಲಿ ರೋಷದಿ ಕಡಿದು ||
ಹರಿಅಸ್ತ್ರವ ಪುನ ಎಸೆದ | ಸು |
ದರುಶನ ಗರುಡನೊಳಿರಿದ ||1||

ಕರದಲಿ ಪವನನ ಧರಿಸಿ | ಅತಿ |
ಭರದಲಿ ಬಿಡಲಾ ಸಹಸಿ ||
ತರಿದನು ಪವನಾಶದಲಿ | ದುರು |
ಳರುಹಿದ ನಗುತಲಿ ಕ್ಷಣದಿ ||2||

ಹಾರದಿರೆಲವೋ ನರನೆ | ಎಂ |
ದಾರುಭಟಿಸಿ ತಿಮಿರವನೆ ||
ತೋರಿಸಿ ಹೂಡಿದ ಕುಮನ | ಅವ |
ಸೂರಿಯನಿಂ ಬೆಳಗಿದನು ||3|| 169||

**ಭಾಮಿನಿ**
ಅರಸ ಕೇಳ್ ದಾನವನು ಬಿಟ್ಟಿಹ |
ಸರುವ ಬಾಣವ ವೀರ ತರಿಯಲು |
ಅರೆನಿಮಿಷ ಬೆರಗಾಗಿ ಖೂಳನು ಡೊಣೆಗೆ ಕೈಯಿಡಲು ||
ಶರವು ಬರಿದಾದುನು ಅರಿಯುತ |
ಹರನು ಕರವೆತ್ತಿತ್ತ ಶಕ್ತಿಯ |
ಕರದಿ ಧರಿಸುತ ಅಂತಕಾಂತಕನಂತೆ ಗರ್ಜಿಸಿದ ||1|| 170||

**ಸೌರಾಷ್ಟ್ರ - ತ್ರಿವುಡೆ**
ಖಿಡಿಯನುಗುಳುತ ದಾನವನು ಪಲ್ |
ಗಡಿದು ನುಡಿದೀಶರವ  ಗೆಲಿದರೆ |
ಕಡುಹುಗಾರನು ನೀನೆನುತ ಶರ | ನೊಡನೆ ಬಿಟ್ಟ ||1||

ದುರುಳನೆಸೆದಸ್ತ್ರವ ಸುದರ್ಶನ |
ಭರಿತ ತೋಷದಿ ನಭದ ಮಧ್ಯದಿ |
ಗರಗರನೆ ಕಡಿಯಲ್ಕೆ ಸುರರೂ | ಹರುಷಪಡಲು ||2||

ತರಿಯುತದ ಕಾಣುತ್ತ ದಾನವ |
ರರಸ ತ್ವರದಿಂದೋಡೆ ಚಕ್ರನು |
ಹರಿಯ ವೇಗದಿ ಹಿಡಿದು ಶಿರವನು | ತರಿದನಾಗ ||3||

ಅರೆಗುಲಿಯ ಶಿರ ಧರೆಗೆ ಬೀಳಲು |
ಧರಣಿಭಾರಕನಳಿದನೆನ್ನುತ |
ಸುರರು ಸುಮವೃಷ್ಟಿಯನು ಸುರಿದರು | ಧರಣಿಗಾಗ ||4|| 174||

**ಆರ್ಯಸವಾಯಿ - ಏಕ**
ಸುರರತಿ ಸುಮಮಳೆಗರೆಯೆ ಸುದರುಶನ |
ಗರುವದಿ ಸಿರಿವರಗಿಂತ ಘನ ||
ಧುರವಿಕ್ರಮ ತಾನೆನುತಂಕಾರದಿ |
ಹರಿತಂದನು ಪುರದೆಡೆಗವನ ||1|| 175||

**ತೋಡಿ - ರೂಪಕ**
ಅಂಧಚರನ ಕೊಂದ ಗರ್ವದಿ | ಪ್ರಸೂಧನಾರಿ |
ಬಂದ ಸಿಂಧು ತಡಿಗೆ ತೋಷದಿ ||
ಇಂದ್ರ ಸುರರು ಕಾಣುತೆರಗಿ | ಚಂದದಿಂದ ಜಯವ ಪಾಡಿ |
ಮಂದಿರದೊಳು ಕರೆದು ತರೆ ಮು | ಕುಂದನನ್ನು ತ್ಯಜಿಸಿ ನಿಂದ ||1||

ಬಂದು ದೂರದಲ್ಲಿ ನಿಂದಿಹ | ಚಕ್ರನನು ಕಂಡು |
ಇಂದಿರೇಶನಿವಗೆ ಬಂದಿಹ ||
ಮಂದಬುದ್ಧಿ ತರಿವ ಕಾಲ | ವಿಂದು ಒದಗಿತೆಂದು ಮೌನ |
ದಿಂದ ಇರಲು ಸಿಂಧುತನಯೆ | ವಂದಿಸುತ್ತಲೆಂದಳಾಗ ||2|| 177||

**ಬೇಗಡೆ - ಏಕ**
ಏನಿದೇನಿದು ಪ್ರಾಣದೊಲ್ಲಭನೆ | ಆ ವೀರಚಕ್ರನು |
ಮೌನದಿಂ ನಿಂದಿರ್ಪ ಪರಿಯನ್ನೆ ||
ಕಾಣಲವನನು ನಿಮ್ಮ ಕರದಲಿ |
ಅನುದಿನವು ಮನೆ ಮಾಡಿ ದಿನವನು |
ಎಣಿಸುತಿರ್ಪಗೆ ಘನತೆ ಏನಿದು |
ಸಾನುರಾಗದೊಳರುಹಿರೆನ್ನೊಳು ||1|| 178||

**ಸೌರಾಷ್ಟ್ರ - ತ್ರಿವುಡೆ**
ಕ್ಷೀರಹರಿ ಎರಕಿರುವ ತೆರ ನೀ |
ವೀರ್ವರಿದ್ದಿರಿ ಇಂದು ನಿಮ್ಮೊಳ |
ಗಾರು ಭೇದವ ಗೈಸಿದರು ನಾ | ನರಿಯೆನಿದನು ||1|| 179||

**ಸಾರಂಗ - ಅಷ್ಟ**
ನಿಮ್ಮೊಳಪ್ಪಣೆ ಪಡೆದು | ದಾನವನನ್ನು |
ಗುಮ್ಮನೆ ರಣದಿ ಕೊಂದು ||
ನಮ್ಮ ಪಟ್ಟಣಕೈದು | ತಮ್ಮ ಕರವನಿಂದು |
ಹಮ್ಮಿನೊಳೇರದೆ ಸುಮ್ಮನಿರುವನೇಕೆ ||1|| 180||

**ಸಾವೇರಿ - ರೂಪಕ**
ಕೇಳಿಂದುವದನೆ ಕುಂದರದನೆ | ಸಿಂಧುನಂದನೆ ||
ಮಂದಭಾಗ್ಯನಿಂದು ಖಳನ | ಕೊಂದು ಬಂದನೆ ||1||

ಆ ದುರುಳನನ್ನು ತರಿದ ಗರ್ವ | ಶಿರಕೆ ಏರ್ದುದು ||
ಗರುವ ಇಳಿಪೆ ತಾಳೆನುತ್ತ | ಒರೆದನವನೊಳು ||2|| 182||

**ಮಧ್ಯಮಾವತಿ - ತ್ರಿವುಡೆ**
ವೀರ ಬಾ ನೀ ಕರವನೇರದೆ |
ದೂರ ನಿಂದಿಹೆ ಏಕೆ ಎನ್ನೊಳು |
ಭೂರಿ ಕೋಪದಿ ಮೌನವಿರುವರೆ |
ಕಾರಣವ ನಾನರಿಯೆನು | ಬಾರೊ ಬಳಿಗೆ ||1||

ಏನು ಅಪರಾಧವೆಸಗಿದೆನು ನಿನ |
ಗೇನು ಅಪಮಾನವನು ಗೈದೆನು |
ಮಾನನಿಧಿ ಎನ್ನಿಂದಲಡಸಿದ |
ಊನಗಳನೊಂದುಳಿಸದೆ | ಜಾಣ ಪೇಳು ||2|| 184||

**ಸಾಂಗತ್ಯ - ರೂಪಕ**
ಮಾಧವ ಕೇಳು ನಾನಾದಿಯೊಳ್ ನಿನ್ನ ಮಾ |
ತಾದರದೊಳು ಮದಮುಖರ ||
ಸಾಧನೆಯಲಿ ಕೊಂದೆ ಆದರೆ ನಿನಗಿಂತ |
ಮೇದಿನಿಯೊಳು ಘನವಂತ ||1|| 185||

**ಭಾಮಿನಿ**
ಆಲದೆಲೆಯೊಳು ಮಲಗಿ ತೇಲುವ |
ಕಾಲ ಮಧು ಕೈಟಭರು ಜನಿಸುತ |
ನಾಳಿಕೋದ್ಭವನನ್ನು ಪೀಡಿಸೆ ಹಲಕೆಲವು ಕಾಲ ||
ಕಾಳಗವನೆಸಗುತ್ತಲವರಲಿ |
ಸೋಲು ನಿನ್ನಯ ಪಾಲಿಗಡಸಲು |
ಮೇಲೆ ಎನ್ನನು ಕಳುಹೆ ನಾನವರನ್ನು ತರಿದಿಹೆನು ||1|| 186||

**ಕೇದಾರಗೌಳ - ಅಷ್ಟ**
ಹೆಚ್ಚೇಕೆ ಪ್ರತ್ಯಕ್ಷಕೆ ಪ್ರಮಾಣವು ಬೇಕೆ |
ಸಚ್ಚಿದಾನಂದ ನೀನು ||
ಅಚ್ಚಾಳುಸೂಧನನಲಿ ಬೆಚ್ಚಿ ಬಂದಿಹೆ |
ಕೆಚ್ಚದೆ ವಧೆಗೈದೆನು ||1|| 187||

**ಮಾರವಿ - ಏಕ**
ಈತೆರನೆಂದುದ ಕೇಳುತ ಲಕ್ಷ್ಮೀ |
ನಾಥನು ಖಾತಿಯೊಳೀ ||
ಧೂರ್ತನಿಗೇರಿದ ಮತ್ತವ ಮುರಿವೆಂ |
ದಾತನಿಗುಸುರಿದನು ||1|| 188||

**ಸೌರಾಷ್ಟ್ರ - ತ್ರಿವುಡೆ**
ಎಲೆ ಸುದರ್ಶನ ತಿಳಿದೆ ನಿನ್ನಯ |
ಒಳವ ದಾನವರನ್ನು ತರಿದಿಹ |
ಬಲವು ತಲೆಗೇರಿರುವುದನು ನಾ | ನಿಲಿಪೆ ಘಳಿಲ ||1||

ಉಂಡ ಗೃಹಕೆರಡೆಣಿಸಿದೆಯ ಭಲ |
ಗುಂಡಕರ್ಮಕಯೋಗ್ಯ ನೀ ಭೂ |
ಮಂಡಲದಿ ನರನಾಗಿ ಜನಿಸೈ | ಮಂದಮೂಢ ||2||

ಅಲ್ಲಿ ಭೂಸುರಕುಲದೊಳುದಿಸುತ |
ಎಲ್ಲ ವಿಕ್ರಮ ಕಾಂಬೆ ನಿನ್ನಯ |
ಕ್ಷುಲ್ಲ ನೀನಡೆಯೆಂದನಾಕ್ಷಣ | ಫುಲ್ಲನಾಭ ||3|| 191||

**ಭಾಮಿನಿ**
ಕರಿಯ ಪೊರೆದನ ನುಡಿಯ ಕೇಳಿ ಸು |
ದರುಶನಗೆ ಸುಜ್ಞಾನ ಮೂಡಲು |
ಕರವ ಜೋಡಿಸಿ ಚರಣಕೆರಗುತ ನುತಿಸಿದನು ಹರಿಯ ||
ಶರಣರಕ್ಷಕ ಮೋಕ್ಷದಾಯಕ |
ದುರುಳಶಿಕ್ಷಕ ಪಕ್ಷಿವಾಹನ |
ನರಹರಿಯೆ ಪ್ರಹ್ಲಾದರಕ್ಷಕ ಕ್ಷಮಿಸೆನುತಲೆಂದ ||1|| 192||

**ಸಾರಂಗ - ಅಷ್ಟ**
ಮನ್ನಿಸೆನ್ನಪರಾಧವ | ಮಾಧವ ಸುಪ್ರ |
ಸನ್ನ ಮೂರುತಿ ಕೇಶವ ||
ಎನ್ನೊಳೇತಕೆ ಭೇದ | ನಿನ್ನೊಳಿಲ್ಲವು ವಾದ |
ಮುನ್ನ ನಂಬಿದೆ ಪಾದ | ಇನ್ನಾಂತುಕೊ ಮೋದ ||1||

ತಿಳಿಯದಜ್ಞಾನವೆನ್ನ | ತಲೆಯೊಳಗೆ ಅಡರಿ |
ಬಲು ಮೂದಲಿಸಿದೆ ನಿನ್ನ ||
ಜಲಜಾಕ್ಷ ನಿನ್ನರೆ | ಘಳಿಗೆ ಬಿಟ್ಟಿರಲಾರೆ |
ಇಳೆಯೊಳನುದಿನ ಹ್ಯಾಗೆ | ಕಳೆಯಲಿ ಆದರೆ ||2|| 194||

**ಸೌರಾಷ್ಟ್ರ - ತ್ರಿವುಡೆ**
ತೆರಳುವೆನು ಭೂಲೋಕದಲಿ ಎನ |
ಗಿರವ ಕಾಣೆನು ಬಳಿಕ ವಿದ್ಯಾ |
ಗುರುವು ತಾಯ್ತಂದೆಗಳು ಯಾರೆಂ | ದರುಹು ದೇವ ||1||

ಪರಮವೇದೋದ್ಧರಣ ನಿನ್ನಯ |
ಚರಣ ದರುಶನ ಬೇಗ ಕರುಣಿಸು |
ಧರೆಯೊಳೆನ್ನನು ಬಳಲಿಸದಿರ್ೈ | ಹರಿಯೆ ನೀನು ||2|| 196||

**ಕೇದಾರಗೌಳ - ಅಷ್ಟ**
ಭಕ್ತ ಚಿಂತಿಸಬೇಡ ಕೃತವೀರ್ಯಸುತನಾಗಿ |
ಪೃಥ್ವಿಯೊಳ್ ಜನಿಸು ನೀನು ||
ಅತ್ರಿಜನಾಗಿ ಸಮಸ್ತ ವಿದ್ಯೆಯ ಬೋಧಿ |
ಸುತ್ತಹುದೆನಿಸುವೆನು ||1||

ಮತ್ತೆ ಭಾರ್ಗವರಾಮನಾಗಿ ಯುದ್ಧದಿ ಕತ್ತ |
ಕೆತ್ತುತ ಮೋಕ್ಷವನೀ ||
ಯುತ್ತ ಮಾತಾಪಿತೃಗಳ ಚಿತ್ತ ಶಾಂತಿಗೆ |
ಕ್ಷತ್ರಿಯರನು ಕೊಲ್ಲುವೆ ||2||

ಪೋಗೆಂದು ಹರಸಲು ಬಾಗುತ್ತ ಪಾದಕ್ಕೆ |
ನಾಗಶಯನ ರಕ್ಷಿಸೆಂದು ||
ಬೇಗ ಸುದರ್ಶನ ಮಾನವಲೋಕಕ್ಕೆ |
ಸಾಗಿದ ಶುಭಕೋರುತ ||3|| 199||

**ಸೌರಾಷ್ಟ್ರ - ತ್ರಿವುಡೆ**
ಅಂತಕಾತ್ಮಜ ಕೇಳ್ ಸುದರ್ಶನ |
ಸಂತಸದಿ ತೆರಳಲ್ಕೆ ನಿರ್ಜರ |
ಸಂತತಿಯು ವಂದಿಸುತ ಪೋದರು | ಸ್ವಂತ ಗೃಹಕೆ ||1||

ಮತ್ತೆ ಮಾಧವನತ್ರಿಸುತನಾ |
ಗುತ್ತ ಧರೆಯೊಳು ಮೆರೆವ ಸಹ್ಯ |
ಗೋತ್ರದಲಿ ವಾಸಿಸುತಲಿದ್ದನು | ಅರ್ತಿಯಿಂದ ||2||

ಕ್ಷಿತಿಪ ಪಾಂಡುಜನಿಂಗೆ ಪ್ರೇಮದಿ |
ಯತಿಪ ಮಾರ್ಕಾಂಡೇಯನರುಹಿದ |
ಕಥೆಯ ಯಕ್ಷರಗಾನದಲಿ ಶ್ರೀ | ಪತಿಯ ದಯದಿ ||3||

ಬರೆದಿಹೆನು ಬೋಳೂರು ಗ್ರಾಮದೊ |
ಳಿರುವ ದೋಗುರನವರ ಎರಡನೆ |
ತರಳ ನಾ ಮಧುಕುವರನೆನ್ನುತ | ಕರೆವರೆಲ್ಲ ||4||

ಇದರೊಳಗೆ ಛಂದಸ್ಸು ತಾಳವು |
ಮೊದಲೆ ತಪ್ಪಿರಬಹುದು ತಿಳಿದಿಹ |
ಬುಧರು ಮನ್ನಿಸಬೇಕು ಎನ್ನನು | ಸಾದರದಲಿ ||5|| 204||

**ಅಹೇರಿ - ಏಕ**
ಮಂಗಲ ಲಕ್ಷ್ಮೀಲೋಲನಿಗೆ | ಜಯ |
ಮಂಗಲ ತ್ರೈಜಗದೀಶ್ವರಗೆ ||
ಮಂಗಲ ಮತ್ಸ್ಯವತಾರನಿಗೆ | ಜಯ |
ಮಂಗಲ ದೀನೋದ್ಧಾರನಿಗೆ | ಮಂಗಲ ||1||

ಅಂಗಜಪಿತ ಶ್ರೀರಂಗನಿಗೆ | ಜಯ |
ಗಂಗಾಧರಸಖ ಮಾಧವಗೆ ||
ಮಂಗಲಂ ಜಯಮಂಗಲಂ ಶುಭಮಂಗಲಂ ||2|| 206||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ತಿಳಿದಿಲ್ಲ

**ಪ್ರಸಂಗ ಪ್ರತಿ ಆಧಾರ:** ಪ್ರಕಟಿತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಶ್ರೀ ಗುರುರಾಜ ಹೊಳ್ಳ ಬಾಯಾರು

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಲ. ನಾ. ಭಟ್ಟ, ಹರಿಕೃಷ್ಣ ಹೊಳ್ಳ

**ಅಂತರಜಾಲ ಪ್ರತಿ ಬರವಣಿಗೆ:** ಲ. ನಾ. ಭಟ್ಟ, ಹರಿಕೃಷ್ಣ ಹೊಳ್ಳ

**ಅಂತರಜಾಲ ಪ್ರತಿ ವಿನ್ಯಾಸ:** ಲ. ನಾ. ಭಟ್ಟ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ಶಿವಕುಮಾರ ಬಿ. ಎ. ಅಳಗೋಡು, ನಟರಾಜ ಉಪಾಧ್ಯ, ಅಶ್ವಿನಿ ಹೊದಲ